


ಸಂಪುಟ ೭ | ನವಂಬರ್ ೧೯೪೭ | ಸಂಚಿಕೆ ೮

ಸ್ವಾಗತ

ಕೊರವಂಜಿಯು ಆಗಸ್ಟ್ ಹದಿನೈದರಂದು ಹಬ್ಬವನ್ನಾಚರಿಸಿದಾಗಲೇ ಊರಿಗೆ ಬಂದ ಸ್ವಾತಂತ್ರ್ಯ ಕೇರಿಗೆ ಬಾರದೇ ಹೋದೀತೆ ಎಂದಂದುಕೊಂಡಿದ್ದಳು. ಕನ್ನಡದ ಹಿರಿಯ ಕೇರಿಯಲ್ಲಿ ಕಾಂಗ್ರೆಸು ಸತ್ಯಾಗ್ರಹ ಹೂಡಿತು. ಯುವಕರೆಲ್ಲರೂ, ಅದರಲ್ಲೂ ವಿದ್ಯಾರ್ಥಿನಿ, ವಿದ್ಯಾರ್ಥಿಗಳು -- ಅನುಪಮ ಧೈರ್ಯ, ತ್ಯಾಗ, ತೋರಿ ಸತ್ಯಾಗ್ರಹ ಮುಂದುವರೆಸಿದರು. ದೊರೆಯು ತನಕ ದೂರ ಹೋಯಿತು. ಕಾಂಗ್ರೇಸಿನವರು ನ್ಯಾಯವಾಗಿ ಬೇಡಿದುದನ್ನೆಲ್ಲಾ ಕೊಡುಗ್ಗೈ ಧೊರೆಯು ಇತ್ತನು. ಪ್ರಜಾಸರ್ಕಾರವೇರ್ಪಟ್ಟಿತು.

ಅಹಿಂಸೆ, ಸತ್ಯ, ತ್ಯಾಗ, ಇವುಗಳನ್ನೇ ಅಸ್ತ್ರಗಳನ್ನಾಗಿಸಿ ಸಮರ ವಿಜಯಿಗಳಾದ ಕಾಂಗ್ರೇಸ್ ಮುಖಂಡರಿಗೆ ನಮ್ಮ ಧನ್ಯವಾದಗಳು. ಹಲವಾರು ಮುಖಂಡರು ಕೊರವಂಜಿಯ ಕ್ಷೇಮಾಭಿಲಾಷಿಗಳು, ಹಾಗೂ ಪ್ರೇಮಾಭಿಲಾಷಿಗಳು. ಹಿರಿದಾದ ಜವಾಬ್ದಾರಿಯನ್ನು ಹೊತ್ತು ಶ್ರಮಿಸುವ ನಮ್ಮ ಮುಖಂಡರಿಗೆ---ನಮ್ಮ ಸಂಪೂರ್ಣ ಬೆಂಬಲ ನೀಡಿ ಆಗಿಂದಾಗ್ಯೆ ವ್ಯಂಗ್ಯಸನ್ನಿವೇಶಗಳನ್ನು ತಿಳಿಸಿ, ನಗಿಸಿ ಮನಸ್ಸು ಹಗುರಮಾಡಲು ಖಂಡಿತ ಯತ್ನಿಸುತ್ತೇವೆ---

ಜೈ ಹಿಂದ್.


★ ಅಭಿವಂದನೆ ★

ಕಾಸರಗೋಡಿನ ಸಾಹಿತ್ಯ ಸಮ್ಮೇಳನಕ್ಕೆ ಈ ವರ್ಷ ಕಡುಗಲಿ ಶ್ರೀ ತಿ. ತಾ. ಶರ್ಮರವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಶೈಲಿ ಶಿಲ್ಪಿ ಶರ್ಮ ಎಂದು ಹೆಸರಾದವರು, ಉಕ್ಕಿನ ಮಾತುಗಳನ್ನು ಬಿಗಿ ದೆಸೆವವರು, ಸ್ವಾತಂತ್ರ್ಯಕ್ಕಾಗಿ ಜೀವವನ್ನೇ ಮೀಸಲಾಗಿಟ್ಟವರು. ಕೈಲಾಸಂರವರ ಹಿರಿಮೆಯನ್ನು ಮೊದಮೊದಲಲ್ಲೇ ಕಂಡವರು ; ಕರ್ಣಾಟಕದ ಏಕೀಕರಣವನ್ನು ಕನಸುಗಾಣುವವರು ; ಇಂತಹ ಶರ್ಮರವರು ಭಾಷಾವಾರು ಪ್ರಾಂತ್ಯ ನಿರ್ಮಾಣ ಪರ್ವಕಾಲದಲ್ಲಿ ಅಧ್ಯಕ್ಷರಾಗಿರುವುದು ನಮ್ಮ ಭಾಗ್ಯ.

ನರೆಕೂದಲ ಶ್ರೀಯುತ--ಶ್ರೀ ಏನು ಬಂತು--- ಸರಸ್ವತೀಯುತರ ಹುಮ್ಮಸ್ಸಿನ ಒಂದು ಭಾಗವಾದರೂ ಕನ್ನಡಿಗರಲ್ಲಿ ಮೂಡಿದರೆ, ಕರ್ಣಾಟಕದ ಏಕೀಕರಣ ಖಂಡಿತ--ಕನ್ನಡ ಸ್ವರ್ಣಯುಗ ಉದಯಿಸಿದಂತೆಯೇ. ನಮ್ಮ ಶರ್ಮ ಅವರಿಗೆ ಮನಃಪೂರ್ವಕ ಅಭಿವಂದನೆಗಳು.

ಜೈ--ನಗೆಗನ್ನಡಾಂಬೆ.



ಬಯಸಿ ಬಯಸಿ ಆ ಲೇಡಿ ಡಾಕ್ಟರನ್ನ ಮದುವೆಯಾದೆಯಲ್ಲಾ ? ಸಂಸಾರ ಹೇಗಿದೆ ಯಯ್ಯಾ ?

ಏನು ಹೇಗಾದರೂ ಇರಲಿ--ಆಕೆ ಷರಟು ಗುಂಡಿ ಹೊಲೆದರೆ, ಕಿತ್ತು ಬರುಲ್ಲಪ್ಪ---

ಉರಿಗಾಳು

ಹೊಸ ಮಂತ್ರಿಮಂಡಲ ರಚನೆಯಾದ ದಿನವೇ ಬೆಂಗಳೂರಿನ ಹಲವು ಜ್ಯೋತಿಷ್ಕರು ಮೂಟೆ ಕಟ್ಟಿ ಮೂಕರಾದರಂತೆ.

*　*　*　*

ಕರ್ಣಾಟಕ ಸಿಂಹಾಸನವನ್ನು ಇನ್ನುಮೇಲೆ ಕನ್ನಡ ನಾಡಿನ ಸಿಂಹಗಳೇ ಕಾಪಾಡುತ್ತವಂತೆ.

*　*　*　*

ಆರ್ಕಾಟ್ ಪತನದ ವಿಷಯವಾದ ಪ್ರಶ್ನೆ ಈ ವರ್ಷ ಲೋವರ್‌ಸೆಕಂಡರಿ ಪರೀಕ್ಷೆಯಲ್ಲಿ ಬರುವ ಸಂಭವವೇ ಇಲ್ಲವಂತೆ.

*　*　*　*

ವಿಜಯದಶಮಿ ದಿನ ಎರಡು ಲಕ್ಷ ಹಿಂದೂಗಳೂ ಸಿಖ್ಖರೂ ಸೀಮೋಲ್ಲಂಘನ ಮಾಡಿ ಪೂರ್ವಪಂಜಾಬಿಗೆ ಬಂದರಂತೆ.

*　*　*　*

ಇನ್ನುಮುಂದೆ ಪೋಲೀಸೆಂಬ ಹೆಸರನ್ನೇ ಬದಲಾಯಿಸಿ, ಅವರಿಗೆಲ್ಲ "ಶಿಶು ಪಾಲಕರು" ಎಂಬ ಹೆಸರನ್ನಿಡಲು ಸೂಚನೆ ಬಂದಿದೆಯಂತೆ ಹೌದು ! ಅವರ ಈಗಿನ ಹೆಸರಿನ ಮೂರರಲ್ಲಿ ಎರಡು ಭಾಗ ಚೆನ್ನಾಗಿಲ್ಲ.

*　*　*　*

"ಬ್ರಿಟಿಷ್ ರಾಣಿ ಸಿಗರೇಟು ಸೇದುವುದಿಲ್ಲ" (ಪತ್ರಿಕೆ)....ಪಾಪ ! ಆ ಪದಾರ್ಥಕ್ಕೆ ಅಲ್ಲಿ ಅಷ್ಟು ಬೆಲೆ ಏರಿ ಬಿಟ್ಟಿದೆಯೆ ?

*　*　*　*

"ನೀವು ರಚಿಸುವ ರಾಜ್ಯಾಂಗ ಇಂಡ್ಯಾದೇಶಕ್ಕೆಲ್ಲ ಮಾದರಿಯಾಗಿರಬೇಕು" (ಪ್ರಭುಗಳ ಸಂದೇಶ) ತಾತ್ಕಾಲಿಕ ಮಂತ್ರಿಮಂಡಲದ ರಚನೆಯಲ್ಲೇ ಕಾಂಗ್ರೆಸ್ ಲೀಗ್ ಒಪ್ಪಂದ ಮಾಡಿಕೊಂಡು, ಅವರು ಆ ಸಂದೇಶವನ್ನು ಅನುಸರಿಸಿ ಪ್ರಭು ಚಿತ್ತಕ್ಕೆ ಹರ್ಷ ತಂದಿದಾರೆ.

" ಮಂತ್ರಿಮಂಡಲದ ಹೆಸರುಗಳನ್ನೋದಿದಾಗ ನನಗೆ ತುಂಬ ಧೈರ್ಯ ಬಂತು " (ಭಾಷಣ)....ಭಾಷಣಮಾಡಿದವರು ತೀರ ಗಂಡಸಿರಬೇಕು.

* * * *

" ಬಟ್ಟೆ ಅಭಾವವನ್ನು ನಾವು ಆದಷ್ಟು ಪರಿಹರಿಸಲು ಪರಿಶ್ರಮಿಸುತ್ತೇವೆ " (ಮಂತ್ರಿಗಳ ಭಾಷಣ)....ಅವರ ಉಡುಪನ್ನು ನೋಡಿದವರೆಲ್ಲರಿಗೂ ಈ ಭರವಸೆಯ ನಿಜಾಂಶ ವೇದ್ಯವಾಗುವುದು.

* * * *

" ಹತ್ತರಲ್ಲಿ ಹನ್ನೊಂದನೆಯವ ಎಂದು ನಾವು ದಿವಾನರನ್ನು ಭಾವಿಸುವುದಿಲ್ಲ " (ಭಾಷಣ)....ಅದು ನಮಗೂ ಗೊತ್ತು. ಹತ್ತರಲ್ಲಿ ಹತ್ತನೆಯವರೇ ಅವರು.

* * * *

ಮಂತ್ರಿಗಳ ಸಂಖ್ಯೆ ಹೆಚ್ಚಿದ ಹಾಗೆಲ್ಲ ಮೈಸೂರಿನ ಮಾವಿನಮರಗಳು ಬೋಳಾಗುತ್ತ ಬರುತ್ತವಂತೆ....(ಸುದ್ದಿ) ...ಆದರೆ, ಈ ಮಂತ್ರಿಗಳಿಗೆ ಯಾರೂ ಸೊಪ್ಪು ಹಾಕುವಂತಿಲ್ಲ.

* * * *

ಭಾಷಣಕಾರರು : ಗಂಡಸರೂ ಹೆಂಗಸರೂ ರಾಜಕೀಯದಲ್ಲಿ ಸರಿಸಮಾನರು!

ಮಹಿಳೆಯೊಬ್ಬರು : ಹಾಗೆ ವಿಪರೀತ ಜಂಭ ಕೊಚ್ಚಿಕೊಳ್ಳಬೇಡಿ ...ಸ್ವಾಮಿ!

* * · *

" ಈ ದೇಶದಲ್ಲಿ ಸುಖಸಂಪತ್ತನ್ನು ನೆಲೆಗೊಳಿಸಲು ನಮಗೆ 3 ವರ್ಷಗಳ ಅವಕಾಶ ಕೊಡಿ ! ನಾಳೆಯೇ ನಾವು ಅದಕ್ಕೆ ಬೇಕಾದ್ದೆಲ್ಲವನ್ನೂ ಮಾಡುತ್ತೇವೆ " (ಭಾಷಣ)


* · * *

ಪ್ರಶ್ನೆ : ನಿಮ್ಮೂರಲ್ಲಿ ಸಿನಿಮ ನಾಟಕ ಯಾವುದೂ ಇಲ್ಲವೇನ್ರಿ ?

ಉತ್ತರ : ಇಲ್ಲ ! ಆದರೆ,........ಮುನಿಸಿಪಲ್ ಮೀಟಿಂಗ್ ಇದೆ, ತಿಂಗಳಿಗೆರಡು !

* * * *

——o——



ಬಿ. ಜಿ. ಗೆ ಬದಲಾಯಿಸು

ಸಂಪಾದಕರೆ,

ಸಿಕಂದರಾಬಾದಿನ ಸುದ್ದಿ ಬರೆಯಿರಿ ಎಂದು ಹೇಳಿದ್ದಿರಲ್ಲಾ ಇಲ್ಲೇನೂ ಅಷ್ಟು ಹೆಚ್ಚು ವಿಶೇಷವಿಲ್ಲ. ನಾಲ್ಕಾರು ಜನ ಪೋಲೀಸಿನವರನ್ನು ಕೇಳಿದೆ ಎಲ್ಲಾ ಶಾಂತವಾಗಿದೆ ಅಂದರು. ನಾಲ್ಕು ಜನ ಇನ್ನೊಂದು ಕೋಮಿನವರನ್ನು ಕೇಳಿದೆ. 'ಎಲ್ಲವೂ ಶಾಂತವಾಗಿದೆ ಹೆಂಡಿರು ಮಕ್ಕಳನ್ನೆಲ್ಲಾ ತೌರಿಗೆ ಕಳಿಸಿದ್ದೇವೆ. ಇದ್ದದ್ದೆಲ್ಲಾ ಬಿ. ಜಿ.ಗೆ ಬದಲಾಯಿಸಿದ್ದೇವೆ' ಅಂದರು. ಇದೇನು, ಬಿ. ಜಿ. ಗೆ - ಬದಲಾವಣೆ, ಇದೇನಾದರೂ ಗೂಢರಹಸ್ಯವೋ ! ಎಂದು ತನಿಖೆಮಾಡಿದೆ.

ಆಗ ತಿಳಿಯಿತು. ಇನ್ನೊಂದು ಕೋಮಿನವರೆಲ್ಲಾ ಇದ್ದುಬದ್ದುದನ್ನೆಲ್ಲಾ ಹೋದಷ್ಟಕ್ಕೆ, ಬ್ರಿಟಿಷ್ ಇಂಡಿಯಾ ಹಣಕ್ಕೆ ಮಾರುತ್ತಿದ್ದಾರೆ. ಬ್ರಿಟಿಷರು ಹೋದರೂ ಇನ್ನೂ ಬಿ ಜಿ. ಹೋಗಿಲ್ಲ. ಒಬ್ಬಾತ ಮನೇಲಿದ್ದ ನಾಲ್ಕು ಸಾಬೂನನ್ನೇ ಬಿ. ಜಿ. ಗೆ ಬದಲಾಯಿಸಿದ್ದ.। ಇನ್ನೊಬ್ಬ ತನ್ನ ಷರಟು ಗುಂಡೀನ ಬಿ. ಜಿ. ಗೆ ಬದಲಾಯಿಸಿದ್ದ. ಒಬ್ಬ ಕಳಿಂಗ ಬಾಗಿಲ ತಗಡು ತೋರಣಾನೇ ಬಿ. ಜಿ. ಗೆ ಬದಲಾಯಿಸಿದ್ದ-- ಇದ್ದವರೆಲ್ಲಾ (ಆ ಇನ್ನೊಂದು ಕೋಮಿನವರು) ಒಬ್ಬೊಬ್ಬರೇ ಇದಾರಾಗಿ ಬೆಳಗಿಂದ ಮಲಗುವ ತನಕ, 'ಬಿ. ಜಿ ಗೆ ಬದಲಾಯಿಸು' ಮಂತ್ರವನ್ನೇ ಪಠಿಸುತ್ತಿದ್ದಾರೆ. ಈ ಶಾಂತಿ ಚಳುವಳಿ ಬಿಟ್ಟರೆ--ಎಲ್ಲವೂ ಶಾಂತವಾಗಿದೆ. ಮಿಕ್ಕ ವಿಚಾರಕ್ಕೆ ಮುಂದೆ ಬರೆಯುತ್ತೇನೆ."



ರೆಡ್ಡೀಗೆ ರಾಜ್ಯವಾದರೆ -
ಊರಿಗೆ ಊರೇ ಸಹಕಾರಕ್ಕೆ ಸಿದ್ಧ-

ಮೈಸೂರು ರುಮಾಲು

ಜವಾಬ್ದಾರಿ ಸರ್ಕಾರ ಬಂದುದರ ಮೊದಲ ಚಿಹ್ನೆ, ಗಾಂಧಿ ಟೋಪಿಗೆ ಲಭಿಸಿರುವ ಮನ್ನಣೆ! ಮೈಸೂರು ರುಮಾಲಿನ ಮಂಗಮಾಯದ ನಾಂದಿ!

ಆಫೀಸ್ ದಫೇದಾರನಿಂದ ಹಿಡಿದು ಸಾಹೇಬರವರೆಗೂ 'ತಲೆ ಶಿರೋಭಾರವಾಗಿ ರಾರಾಜಿಸುತ್ತಿದ್ದ ಜರೀ ರುಮಾಲುಗಳು, ಇನ್ನು ಐದಾರು ವರ್ಷಗಳಲ್ಲೇ ವರಪೂಜೆ, ಕಾನ್‌ವೊಕೇಷನ್, ನಾಟಕರಂಗ, ಇಂಥ ಸ್ಥಳ ಸನ್ನಿವೇಶಗಳಲ್ಲಿ ಮಾತ್ರ ನಮ್ಮ ಕಣ್ಣಿಗೆ ಬೀಳುತ್ತವೊ ಏನೋ ಎಂಬ ಭಯ ನಮ್ಮನ್ನು ಆವರಿಸುತ್ತಿದೆ. "ಮಿರುಮಿರುಗುವ, ಹಾ! ಜರಿತಾರಕೆಯರೇ!" ಎಂದು ನಾವು ಇನ್ನು ಯಾರನ್ನು ಸಂಬೋಧಿಸುವುದು? ಟೋಪಿಗಳ ಪಟಾಟೋಪವೇ ಹೆಚ್ಚಿತಲ್ಲಾ!

ಕಂಠದ ಕೆಳಭಾಗವೆಲ್ಲ ಅಪ್ಪಟ ವರಂಗಿ ಉಡುಪು, ತಲೆಯಮೇಲೆ ಒಂದು ಜರೀ ರುಮಾಲು! ಇಂಥ ಒಬ್ಬ ವಿಚಿತ್ರ ವಿಲಕ್ಷಣ ಪೌರಸ್ತ್ಯ–ಪಾಶ್ಚಾತ್ಯ–ಸಮ್ಮಿಶ್ರರಾಗಿದ್ದ ಮೈಸೂರು ಅಧಿಕಾರಿಗಳು ಇನ್ನುಮುಂದೆ, ಬಿಳೀ ಜುಬ್ಬಿಗರೂ, ನೆಹರೂವೆಸ್ಟರೂ, ಗಾಂಧಿ ಟೊಪ್ಪಿಗಳೂ ಆದ ಮಂತ್ರಿಗಳ ಆಜ್ಞಾನುವರ್ತಿಗಳಾಗಿ ದುಡಿಯಬೇಕಾಗಿ ಬಂದಿದೆ. ಮೈಸೂರಿನ ಪ್ರತ್ಯೇತ ವೈಶಿಷ್ಟ್ಯವೆನಿಸಿದ ಎರಡಂಗುಲ ಮೂರಂಗುಲ ಆರಂಗುಲ ಜರಿ ಅಂಚಿನ ರುಮಾಲುಗಳು ಟೋಪಿ ಗಾಳಿಗೆ ಎದುರು ನಿಲ್ಲಲಾರದೆ ಇತಿಹಾಸದ ಪುಟವನ್ನು ಸೇರಿಬಿಡುತ್ತವೆ. ಇದುವರೆಗೂ ದರ್ಪಸಾಗರದಲ್ಲಿ ತೇಲಾಡುತ್ತಿದ್ದ ಅಧಿಕಾರಿಗಳು ಉದಯ ಭಾಸ್ಕರನನ್ನು ಪೂಜಿಸುವ ತಂತ್ರಕ್ಕನುಸಾರವಾಗಿ, ತಾವೂ ಟೋಪಿಯನ್ನೇ ಧರಿಸತೊಡಗುವರು.

ಇದರಿಂದ ಅವರ ಮೆದುಳಿಗೆ ಹೊಸದೊಂದು ಹುಳಿಯನ್ನು ಹಿಂಡಿದಂತಾಗುತ್ತದೆ. ಜರೀರುಮಾಲು ಹೊತ್ತ ತಲೆಯೊಳಗಿಂದ ಇಂಕಿಲಾಬ್ ಜಿಂದಾಬಾದ್ ಎಂಬ ಕೂಗು ಹೊರಡುವುದೇ ಇಲ್ಲ; ಬಡ ಬೋರೇಗೌಡ, ಎಂಬ ಮಾತೊಕೂಡ ಆ ತಲೆಯಿಂದ ಬಂದರೆ, ಕೃತಕವಾಗುತ್ತದೆ; ನಾಟಕೀಯವಾಗುತ್ತದೆ. ಜಬರ್ದಸ್ತಿಗೂ ಜರಿಗೂ, ಕರೀಪೇಟಿಗೂ ಕಿಂಕಾಪಿಗೂ ನಿಕಟಸಂಬಂಧ. ಜರೀ ರುಮಾಲಿಗರ ಮನೋಭಾವವೇ ಬೇರೆ; ಟೋಪಿಗರ ಮನೋಭಾವವೇ ಬೇರೆ. ಜರೀ ರುಮಾಲನ್ನು ಹುಷಾರಾಗಿ ಧರಿಸಬೇಕು; ನಿಧಾನವಾಗಿ ತೆಗೆಯಬೇಕು. ಅದನ್ನು ಕಟ್ಟುವುದೇ ಒಂದು ಕಲೆ, ಶಿಸ್ತುಗಾರನಿಗೆ ಮಾತ್ರ ಅದು ಸಾಧ್ಯ. ದಪ್ಪಗೆ ಗಂಜಿ ಹಾಕಿ ಅಳತೆಗೆ ತಕ್ಕಂತೆ ಮಡಿಸಿ ಬೆಚ್ಚಗೆ ಇಸ್ತ್ರಿಕೊಡಿಸಿ ಕಟ್ಟುನಿಟ್ಟುಗಳಿಂದ ಕಟ್ಟಿ ಅಂಚಿನ ಮಿಂಚಿಂದ ಬೆಳಗುತ್ತ ನಡೆಯಬೇಕು. ಆಗಿನ ಠೀವಿಯೇ ಪ್ರತ್ಯೇಕ.

ಇಸ್ತ್ರಿಮಾಡಿದ ರುಮಾಲೆಂದರೆ, ಬುರುಡೆಗೂ ಇಸ್ತ್ರಿಮಾಡಿದ ಹಾಗೆಯೆ ! ಮೆರುಗು ಹೆಚ್ಚು. ಥಳಕು ತುಂಬ.

ಗಾಂಧಿ ಟೋಪಿ ಸರಳತೆಯ ಗುರುತು ! ಗೇಣುಬಟ್ಟೆ, ಚೂರು ಸಾಬೂನು–ಸಾಕು. ತುಸು ಕಿಸೆ ಇದ್ದರೆ ತುರುಕಬಹುದು. ಧೂಳು ಹಿಡಿದಿದ್ದರೆ, ಪಟಪಟನೆ ಎರಡು ಬಾರಿ ಬಡಿದರಾಯಿತು. ಆದರ್ಶಕ್ಕೆ ಅದೇ ಗುರುತು. ನ್ಯಾಯಕ್ಕೆ ಅದೇ ನೆನಪು. ಅವಸರಕ್ಕೆ ಒದಗುವ ಅಲಂಕಾರ ! ಚಟ್‌ಪಟ್ ಅಂತ ಕೆಲಸದ ನಿರ್ವಹಣ. ಕಾಯುವುದು, ಕಾಯಿಸುವುದು ಎರಡೂ ಗಾಂಧಿಟೋಪಿ ಧರಿಸಿದವನಿಗೆ ಸಾಧ್ಯವಿಲ್ಲ........ಈಗ, ಜರೀರುಮಾಲು ಧರಿಸಿ ಮೆರೆಯುವ ಅಧಿಕಾರಿಗಳ ತಲೆಗಳಿಂದ ಅವುಗಳನ್ನು ಕೆಳಗಿಳಿಸಿದರೆ ಸಾಕು. ಅವರ ಮುಖದ ಮೇಲಿನ ವರ್ಚಸ್ಸು ತೇಜಸ್ಸು ಓಜಸ್ಸು ಇಮ್ಮಡಿಸುತ್ತದೆ.

ಸರ್ಕಾರಿ ಅಧಿಕಾರಿಗಳೆಲ್ಲ ತಮ್ಮಂತೆಯೇ ವೇಷ ಧರಿಸಬೇಕು ಅಂತ ಪ್ರಧಾನ ಮಂತ್ರಿಗಳು ಹುಕುಂ ಹೊರಡಿಸಿಬಿಡಲಿ ! ತುಟ್ಟಿಭತ್ಯವನ್ನು ಇಮ್ಮಡಿಸಿ ಕೊಟ್ಟಷ್ಟು ಹಣ ಅವರಿಗೆ ಬಟ್ಟೆಬಾಬ್ತಿನಲ್ಲಿ ಉಳಿತಾಯವಾಗುತ್ತದೆ. ಅದಕ್ಕಿಂತ ಮೇಲಾಗಿ, ನೌಕರರ ಮನಃಪರಿವರ್ತನೆಯನ್ನೂ ಅವರು ಮಾಡಿದ ಹಾಗಾಗುತ್ತೆ.

ಆದರೆ, ಹುಕುಂ ಹೊರಡಿಸದೆ ಇದ್ದರೂ ಚಿಂತೆ ಇಲ್ಲ ; ಗೆದ್ದೆತ್ತಿನ ಬಾಲ ಹಿಡಿಯುವ ಮನೋಭಾವ ಮನುಷ್ಯಪ್ರಾಣಿಗಳಲ್ಲಿ ನೆಲಸಿರುವ ತನಕ, ಜನಗಳೇ ಅವರನ್ನು ಅನುಕರಿಸಿ ತಮ್ಮ ವೇಷವನ್ನು ಬದಲಾಯಿಸುತ್ತಾರೆ. ಅಂಥವರನ್ನು ಒದೆಯದೆ ಇದ್ದರೆ, ಸಾಕು ; ಮೆಚ್ಚಿದರೆ ಮಹೋಪಕಾರ.

—ರೇವಣ್ಣ.

———

ಕಾಂಗ್ರೇಸ್ ಸರ್ಕಾರ ಬರುವ ಮೊದಲು ಪೋಲೀಸ್ ಇಲಾಖೇಲಿ ತರಾತುರಿ ವರ್ಗಾವರ್ಗಿಯಂತೆ.

* * * *

ಭಲೋ ಮೈಸೂರು ಅಂತ ಹೊರಟರೆ—–ಹೈದ್ರಾಬಾದ್ ರಸ್ತೆ ಸಿಕ್ಕಿತಂತೆ.

* * * *

ಒಂದು ಕೋಮಿನ ನೆರೆಹೊರೆಯವರೆಲ್ಲರೂ—–

—ಭಲೋ ಹೈದ್ರಾಬಾದ್ ಚಳುವಳಿ ಸೂಡಿದ್ದಾರಂತೆ.

* * * *

ಅಜ್ಜಿ

(ಶಿಶುಗೀತೆ)

೧

ಅಪ್ಪಾ! ಲೋ !....ಅಪ್ಪಾ! ಲೋ !
ಅಡುಗೆ ಮನೆಗೆ ಜಾತಾ ಹೊರಟ್ರೆ
ಪ್ರಭಾತದಲ್ಲಿ ಫೇರೀ ಕಿತ್ರೆ
ದೇವರಮನೆಗೆ ಛಲೋ ಅಂದ್ರೆ
ಜವಾಬ್ದಾರೀ ಹಿಡಿದೇವೆಂದ್ರೆ
ಕಾಲ್ಮುರೀತೇನಂತಾಳಜ್ಜಿ !
ಅಜ್ಜಿ ಕೂಡ ಪೋಲೀನೇನೋ ?

೨

ಅಪ್ಪಾ! ಲೋ !....ಅಪ್ಪಾ! ಲೋ !
ಚಿಕ್ಮನೇಲಿ ಅಮ್ಮ ಕೂತ್ರೆ.
ಕರ್ಫ್ಯೂ ! ಹೊರ್ಗೆ ಬಂದ್ರೆ ಲಾಠಿ !
ಹರಟೆಗೆಲ್ಲ ಪ್ರೀ ಸೆನ್ಸಾರು !
ತಮಾಷೆಗಾಡ್ತಾ ಇದ್ರೆ ನಾವು
ಲಾಕಪ್ ಹಾಕ್ತೇನಂತಾಳಜ್ಜಿ !
ಅಜ್ಜಿಗ್ಹದ್ಬಸ್ತಿಲ್ಲವೇನೋ ?

೩

ಅಪ್ಪಾ! ಲೋ !... ಅಪ್ಪಾ! ಲೋ !
ಕಲ್ನಾಟಾನ್ನಾವಾಡ್ತಾ ಇದ್ರೆ
ಐದ್ಜನ ಸೇರ್ಕೊಂಡೋಡ್ತಾ ಇದ್ರೆ
ಕಣ್ಣಿಂ ಟಿಯರ್ಗ್ಯಾಸ್ ಸುರಿಸ್ತಾ, ಇದ್ರೆ
ಆರ್ಕಾಟ್ನವಾಬರ ಕತೆ ಓದ್ತಿದ್ರೆ
ಹಾಕ್ರೊ! ಬುರುಡೆಗಂತಾಳಜ್ಜಿ !
ಅಜ್ಜಿ ವಯಸ್ಸು ಎಪ್ಪತ್ತೇನೋ ?

೪

ಅಪ್ಪಾ! ಲೋ !....ಅಪ್ಪಾ! ಲೋ !
ಹಾರವ ಹೈಕಳದೇ ಈ ಗುಲ್ಲು !
ಮಿಕ್ಕವರೆಲ್ಲರು ಬಹು ಲಾಯಲ್ಲು !
ಬಿದ್ದವ ತಿಂದವರಿಲ್ಲರು ಹಾರವ-
ರೆಂಬೋ ಬಣ್ಣದ ಚೀಟಿಯ ಕೊಟ್ರೆ--
ಗೂಂಡಾ ! ಗೂಂಡಾ ! ಅಂತಾಳಜ್ಜಿ !
ಅಜ್ಜಿ ಬುದ್ಧಿ ನೆಟ್ಗದೆಯೇನೋ ?

---ಮಿಶ್ರ.

ಪಾತಾಳದಲ್ಲಿ ಪಾಪಯ್ಯ

(೨. ಮಾಮೂಲ್‌ಪುರ.......... ...)

.......ಅಂತ ಒಂದು ಬಡಾವಣೆ, ಪಾತಾಳದಲ್ಲಿ. ಬಂಗಲೆಗಳು, ತೋಟಗಳು, ಕಾರಂಜಿಗಳು, ರಾರಾಜಿಸುವ ವಿದ್ಯುಚ್ಛಕ್ತಿ ದೀಪಗಳು, ಮಾಮೂಲ್‌ಪುರದಲ್ಲಿ ಎಲ್ಲಿ ತಿರುಗಿದರೂ ಲೆಕ್ಕವಿಲ್ಲದಷ್ಟಿದ್ದವು. ಒಂದೊಂದು ಬಂಗಲೆಯನ್ನೂ ನೋಡುತ್ತಿದ್ದರೆ, ಒಂದಕ್ಕಿಂತ ಒಂದು ಭರ್ಜರಿಯಾಗಿದ್ದು ಮನಸ್ಸನ್ನು ಸೂರೆ ಮಾಡುತ್ತಿದ್ದವು. ಅವುಗಳ ಹೆಸರುಗಳೋ, ನವನವೀನವಾಗಿ....... "ನ್ಯಾಯವಿಲ್ಲಾ", "ಮಾಮೂಲ್ ಭವನ", "ಪರ್ಸೆಂಟೇಜ್", "ಪಾತಾಳ ಪರ್ಣಕುಟಿ",........"ಬ್ರೋಕರೇಜ್"... ..

ಆ 'ಬ್ರೋಕರೇಜ್' ಅನ್ನುವ ವಿಳಾಸವನ್ನೇ ಹುಡುಕಿಕೊಂಡು ನಾನು ಆ ರಸ್ತೆಯಲ್ಲಿ ಹೋಗುತ್ತಿದ್ದದ್ದು. ಪಂಚವರ್ಣದ ಸಿಮೆಂಟು ಕಟ್ಟಡ, ವಿಶಾಲವಾದ ಕಾಂಪೌಂಡು, ತಕ್ಕ ಹೂದೋಟ, ಎತ್ತರವಾದ ಮಹಡಿ,........ಒಟ್ಟಿನಲ್ಲಿ ಬಹಳ ಭವ್ಯ ಭವನ, 'ಬ್ರೋಕರೇಜ್'. ಒಳಗೆ ಹೋಗುತ್ತಲೂ, ಎಲ್ಲ ನವೀನ ಸೌಲಭ್ಯಗಳನ್ನೂ ಉಳ್ಳ ದಿವಾನಖಾನೆ ಕೂತುಕೊಳ್ಳುವುದೋ, ಬೇಡವೋ, ಅಂತ ಯೋಚನೆಮಾಡುತ್ತಿದ್ದಾಗ ಒಳಗಿಂದ ಆಳೊಬ್ಬ ಬಂದು, "ಯಾರು, ಏನು?" ಅನ್ನುವ ಕುಶಲ ಪ್ರಶ್ನೆಗಳನ್ನು ಷುರು ಮಾಡಿದ. ಮನೆಯ ಮಾಲೀಕ, ನಾನು ಭೇಟಿ ಮಾಡುವುದಕ್ಕೆ ಬಂದಾತ, ಮನೆಯಲ್ಲಿಲ್ಲವೆಂದೂ, ಹಿಂತಿರುಗಿ ಬರುವುದು ಎಷ್ಟುಹೊತ್ತಿಗೆ ಅನ್ನುವುದು ತಿಳಿಯದೆಂದೂ ತಿಳಿಯ ಬಂತು. ಬೇಕಾದರೆ ಸ್ವಲ್ಪಹೊತ್ತು ಕಾದು ನೋಡಬಹುದಾಗಿ ಅಪ್ಪಣೆ ಪಡೆದು, ಪಾತಾಳದ ಪದ್ಧತಿಯ ಪ್ರಕಾರ ಆ ಆಳಿನ ಅಂತಸ್ತಿಗನುಗುಣವಾಗಿ ದಕ್ಷಿಣೆ ಅರ್ಪಿಸಿ, ಸುಖಾಸೀನವೊಂದರಲ್ಲಿ ಆರೂಢನಾದೆ.

ಮನೆಯಾತ ಬರುವುದರೊಳಗೆ, ಎದುರಿಗೇ ನಿಂತಿದ್ದ ಆಳಿನ ಮುಖಾಂತರ ಅವನ ಯಜಮಾನನ ವೃತ್ತಿಯ ವಿಷಯವಾಗಿ ಆದಷ್ಟು ವಿಶೇಷಗಳನ್ನು ಯಾಕೆ ತಿಳಿಯಬಾರದೆಂಬ ಯೋಚನೆ ಮನಸ್ಸಿಗೆ ಹೊಳೆಯಿತು.

"ಎಷ್ಟು ವರ್ಷದಿಂದ ಇದೀಯಯ್ಯಾ, ಈ ಮನೇಲಿ ಕೆಲಸಕ್ಕೆ?" ಅಂದೆ.

"ಅಯ್ಯೋ ಅದೇನ್ಹೇಳ್ತೀರಿ....... ನಾನಿಲ್ಲಿ ಸೇರಿ ಮೂರು ವರ್ಷ ಆಯ್ತು" ಎಂದು ರಾಗ ಎಳೆದ.

" ಯಾಕೆ ಮೂತಿ ಒಂದು ಥರಾ ಮಾಡಿ ಹೇಳ್ತಿ ? " ಅಂದೆ.

" ನೋಡಿ ಸ್ವಾಮಿ. ಈ ಮನೇಲಿ ಅಡಿಗೆ ಮೊದಲ್ಗೊಂಡು ಎಲ್ಲ ಕೆಲಸಕ್ಕೂ ನಾನೊಬ್ಬನೇ. ಮೂರು ವರ್ಷದಿಂದ, ಬರೋ ತಿಂಗಳು ಸಂಬಳ ಜಾಸ್ತಿ ಮಾಡ್ತೀನಿ -ಮಾಡ್ತೀನಿ, ಅಂತ ಹೇಳ್ತಾನೇ ಬರ್‍ತಿದಾರೆಯೇ ಹೊರತು, ನನ್ನ ಸಂಬಳ ಇನ್ನೂ ನೂರೇ ರೂಪಾಯಿ ! "

ನಾನು ಕಕ್ಕಾಬಿಕ್ಕಿಯಾದೆ. ಮನೆಗೆಲಸದ ಆಳಿಗೆ ನೂರು ರೂಪಾಯಿ ಸಂಬಳ ಅಂದರೆ ! ಅವನನ್ನೇ ಕೇಳಿದೆ.

" ಅಲ್ಲಯ್ಯ, ಅದೇನು ಈ ಸ್ಥಳದಲ್ಲಿ ಆಳುಗಳಿಗೆ ನೂರು ಇನ್ನೂರು ಸಂಬಳ ಸಿಗುತ್ತೆ ? ನಾನೂ ಎಷ್ಟೋ ದೇಶ ತಿರುಗಿದ್ದೀನಿ. ೫-೧೦-೧೫ ಅಂತ ಇರುತ್ತೆಯೇ ಹೊರತು........"

" ಇರಬಹುದು. ಆದರೆ ಈಗ.. ಈಕ್ಷಣ ನಾನಿಲ್ಲಿಂದ ಹೋದೆ ಅಂದರೆ ಬೇರೆ ಕಡೆ ಕಡೇವಕ್ಷ ೧೫೦ ರೂಪಾಯಿ ಸಂಪಾದಿಸಬಲ್ಲೆ. ಇದೇ ಕೆಲ್ಸದಲ್ಲಿ ''.

" ಏನು ಅಂಥಾ ವಿಶೇಷ ನಿಮ್ಮ ಕೆಲಸದಲ್ಲಿ ? "

ಆಳು ಸ್ವಲ್ಪ ಹತ್ತಿರ ಬಂದ. ಶ್ರುತಿ ಸ್ವಲ್ಪ ತಗ್ಗಾಯಿತು. ಸುತ್ತಮುತ್ತ ಎಚ್ಚರಿಕೆಯಿಂದ ತಿರುಗಿನೋಡಿ ಹೇಳಿದ.

" ಯಾರಲ್ಲೂ ಹೇಳಬೇಡಿ. ಹೇಳ್ತೀನಿ ನಮ್ಮ ವಿಶೇಷ. ಈ ಮಾಮೂಲ್ ಪುರದಲ್ಲಿರೋ ಒಂದೊಂದು ಬಂಗಲೆಯ ಮಾಲೀಕರೂ ಲಕ್ಷಾಧೀಶರೋ, ಹತ್ಲಕ್ಷಾಧೀಶರೋ, ಕೋಟ್ಯಾಧೀಶರೋ ಆಗಿದ್ದಾರೆ. ಎಲ್ಲಾ ಈಚೆಗೆ ನಾಲ್ಕೈದು ವರ್ಷದಲ್ಲಿಯೇ ಹಣ ಸಂಪಾದಿಸಿದವರು ''.

" ಯಾವ ವೃತ್ತಿಯಲ್ಲಿ ? "

" ಎಲ್ಲರದೂ ಒಂದೇ ವೃತ್ತೀನೆ. ದಳ್ಳಾಳಿ ವೃತ್ತಿ ಅನ್ನಿ. ಆದರೆ ಎಲ್ಲಾರವೂ ಬೇರೆ ಬೇರೆ ಬಿಸಿನೆಸ್ಸು ....ಒಬ್ಬೊಬ್ಬರದು ಒಂದೊಂದೇ ಬಿಸಿನೆಸ್ಸು , ಜಾಸ್ತಿ ಆದರೆ ಪೀಕಲಾಟವಾಗಿ ಹೋಗುತ್ತೆ ಅಂತ. "

" ಹೌದೌದು, ಅಲ್ಲವೇ ಮತ್ತೆ''....ತಲೆಯಾಡಿಸಿದೆ.

" ನಮ್ಮ ಬೀದಿ ಹೆಸರು ಕಾರ್ ಸ್ಟ್ರೀಟ್ ಅಂತ. ಆಂಗ್ರೆ ರಥದ ಬೀದಿ ಅಂತ ನೋಡೋರಿಗೆ ಅನ್ನಿಸಬಹುದು. ನಿಜವಾಗಿ ಅದಕ್ಕೆ ಆ ಹೆಸರು ಬಂದಕಾರಣ ಬೇರೆ. ಈ ಬೀದಿಯವರೆಲ್ಲಾ ಕಾರಿನ ವ್ಯಾಪಾರದಲ್ಲಿ ದುಡ್ಡು ಬೆಳೆಸಿದವರು ಅಂತ ".

" ಕಾರಿನ ವ್ಯಾಪಾರ ಅಂದ್ರೆ.... . ಕಂಪೆನಿಯಿಂದ ಕಾರು ತರಿಸಿ ಲಾಭಕ್ಕೆ ಮಾರೋದು ತಾನೇ ? ಅದರಲ್ಲಿ ಇಷ್ಟು ಸ್ವಲ್ಪಕಾಲದಲ್ಲಿ ನಿಮ್ಮ ಯಜಮಾನರು ಲಕ್ಷಾಧೀಶರಾದರೇ ? "

" ಅದೇ ವಿಶೇಷ ನಾನು ನಿಮಗೆ ಹೇಳ್ತಿರೋದು. ಅವರು ಯಾವ ಕಾರಿನ ಏಜಂಟೂ ಅಲ್ಲ. ಅವರಲ್ಲಿ ಕಾರು ಇಲ್ಲವೂ ಇಲ್ಲ ''.

" ಮತ್ತೆ ? "

" ಹೇಳ್ತೀನಿ ಕೇಳಿ. ನಮ್ಮ ಯಜಮಾನರು ಬರೀ ದಳ್ಳಾಳಿ ಮಾತ್ರ. ಕೈಯಿಂದ ಕೈಗೆ ಕಾರು ಹಾರಿಸೋದೆಷ್ಟೊ ಅಷ್ಟೆ. ''

" ಬದಲಾವಣೇಲಿ ಎಷ್ಟುತಾನೇ ಬಂದು ಬಿಡುತ್ತೆ ಲಾಭ ? ನನ್ನ ಸ್ನೇಹಿತನೂ ಒಬ್ಬ ಅದೇ ವ್ಯಾಪಾರದಲ್ಲಿದ್ದಾನೆ. ತಿಂಗಳಿಗೆ ಅವನಿಗೆ ನಾನ್ನೂರು ದಕ್ಕಿದರೆ ಮಹಾಪ್ರಸಾದ. ''

" ನೀವು ಈ ಕಡೇವರಲ್ಲ ಅಂತ ಕಾಣುತ್ತೆ, ನೀವು ಮಾತಾಡೋದು ನೋಡಿದರೆ. ನಾ ಹೇಳ್ತಿರೋದು ಹಳೇ ಕಾರಿನ ವಿಷಯ ಅಲ್ಲ ಹೊಸ ಕಾರುಗಳದ್ದು. "

" ಹೊಸಕಾರು ತಗೊಳ್ಳೋಕೆ ಸರ್ಕಾರಿ ಅಧಿಕಾರಿಗಳಿಗೆ ತಾನೇ ಪರ್ಮಿಟ್ ಸಿಗೋದು ! "

" ಹಾಗೆ ಬನ್ನಿ ! ಪರ್ಮಿಟ್ ಅಂದಿರಲ್ಲ, ಅದರಲ್ಲೇ ನಮ್ಮ ಯಜಮಾನರ ವ್ಯಾಪಾರ ! ''

" ಪರ್ಮಿಟ್‌ಗೆಂಥದಯ್ಯ ವ್ಯಾಪಾರ ! " ಕಣ್ಣುಕಣ್ಣು ಬಿಡಲಾರಂಭಿಸಿದೆ ನಾನು.

ನನ್ನ ಮುಗ್ಧತೆ ಅವನಿಗೆ ಬಹಳ ತಮಾಷೆಯಾಗಿ ಕಂಡಂತಿತ್ತು ಕನಿಕರ ತುಂಬಿದ ಪಿಸುಮಾತಿನಲ್ಲಿ ಹೇಳಿದ.

" ನೋಡಿ, ನಿಮಗಿದೆಲ್ಲ ಹೊಸದಾಗಿ ತೋರಬಹುದು. ಈ ಪರ್ಮಿಟ್ ವ್ಯಾಪಾರ ಕಳೆದ ಎರಡು ಮೂರು ವರ್ಷಗಳಿಂದ ಬಹಳ ಕುದುರಿಕೊಂಡಿದೆ. ಇದರಲ್ಲಿ ಒಂದು ಕೈ ಪರ್ಮಿಟ್ ಮಾರುವವರದು, ಇನ್ನೊಂದು ದಳ್ಳಾಳಿಗಳದು. ನೀವು ಹೇಳಿದ ಹಾಗೆ, ದೊಡ್ಡದೊಡ್ಡ ಸರ್ಕಾರಿ ಅಧಿಕಾರಿಗಳಿಗೇ ಪರ್ಮಿಟ್ ಸಿಗೋದು. ನಮ್ಮ ಯಜಮಾನರು ಈ ತರದ ಕೆಲವು ಅಧಿಕಾರಿಗಳ ಗುಪ್ತ ಏಜಂಟರಾಗಿದ್ದಾರೆ. ಇವರ ಕೆಲಸ ಏನಪ್ಪಾ ಅಂತೀರೊ ? ಕಾರಿನ ಯೋಗ್ಯತೆಗೆ ತಕ್ಕ ಹಾಗೆ ಎರಡೊ, ಮೂರೋ, ನಾಲ್ಕೋ ಸಾವಿರ ರೂಪಾಯಿ ಈ ದೊಡ್ಡ ಅಧಿಕಾರಿಗಳಿಗೆ ಮುಟ್ಟಿಸಿ

ಅವರ ಹೊಸ ಕಾರನ್ನ ಹಾರಿಸೋದು........ಎಷ್ಟೋ ಜನ ಹಣವಂತರು ಖಾಸಗಿ ಯವರು, ಹ್ಯಾಗಪ್ಪಾ ನಮ್ಮ ದುಡ್ಡು ಖರ್ಚಾಗೋದು ಅನ್ನುವ ಪೇಚಾಟದಲ್ಲಿ, ಹೊಸ ಕಾರುಗಳಿಗಾಗಿ ಬಾಯಿ ಬಿಟ್ಟುಕೊಂಡು ಕೂತಿದ್ದಾರೆ. ಅವರಿಂದ ಒಂದ ಕ್ಕೆರಡು ಕಕ್ಕಿಸಿ ಕಾರನ್ನ ಅವರಿಗೆ ಕಟ್ಟೋದು,........ಕಾರು ಮಾರಾಟವಾದಾಗ ನನಗೂ ಒಂದಿಷ್ಟು ಚಿಕ್ಕ ಕಮಿಷನ್ ಬರುತ್ತೆ ಅನ್ನಿ, ನನ್ನ ಓಡಾಟದ ಶ್ರಮಕ್ಕೆ."

"ಅಬ್ಬ ! ಒಂದು ಕಾರು ಮಾರಿದರೆ ಆಯ್ತು, ನಿಮ್ಮ ಯಜಮಾನರಿಗೆ ಏಳೋ ಎಂಟೋ ದಕ್ಕಿ ಬಿಡುತ್ತೆ !" ಆಶ್ಚರ್ಯದಿಂದ ಮೂಕನಾಗಿದ್ದ ನಾನು ಅಷ್ಟು ಕೇಳಿದ್ದು ಇನ್ನೊಂದಾಶ್ಚರ್ಯ.

"ಧಾರಾಳವಾಗಿ ; ತೆರಿಗೆ ಗಿರಿಗೆ ಎಲ್ಲಾ ಫ್ರೀ. ನಾನು ಮುಂಚೇನೆ ಹೇಳಿ ದಾಗೆ, ನಮ್ಮ ಯಜಮಾನರ ಕೆಲಸಕ್ಕೆ ಹೆಚ್ಚಿಗೆ ಆಳುಗಳು ಇದ್ದರೆ ತೊಂದರೆ. ಆದಷ್ಟು ಕಡಿಮೆ ಜನ ಇರಬೇಕು, ನಾನೊಬ್ಬನೇ ಇಲ್ಲಿ ಆಳು. ನಾನು ಎಸ್. ಎಸ್. ಎಲ್. ಸಿ. ಫೇಲು. ಅಡಿಗೆಗೆ ಒಂದುಪ್ಪು ಹೆಚ್ಚು ಒಂದು ಹುಳಿ ಕಮ್ಮಿ ಆದರೂ, ನಾನೇ ಬೇಕು. ಇಂಥಾ ಗುಟ್ಟಾದ ಕೆಲಸಗಾರ ಬೇಕಾಗಿರೋವಾಗ, ಕೊಟ್ಟರೆ ಏನು ಸ್ವಾಮಿ ಹೋಗೋದು ಇವರಿಗೆ, ಇನ್ನೂರೋ ಮುನ್ನೂರೋ ! ''

ಮನಸ್ಸಿನಲ್ಲಿ 'ಬಹಳ ಗುಟ್ಟಾಗಿದ್ದಿ ಪರವಾಗಿಲ್ಲ,' ಅಂದುಕೊಂಡು ಹೇಳಿದೆ....

"ಕೊಡಬಹುದು. ಭೇಷಾಗಿ. ಇನ್ನೊಂದು ವಿಚಾರ. ಇವರ ಆಸ್ತಿಪಾಸ್ತಿ ಗೆಲ್ಲ ಹಾಗಾದರೆ ಸರ್ಕಾರದ ದೊಡ್ಡ ಅಧಿಕಾರಿಗಳೇ ಕಾರಣಭೂತರು ಅನ್ನ ಬಹುದೆ ?"


"ಸಂದೇಹವೇ ಇಲ್ಲ. ಅಂತೂ ಅಷ್ಟರಮಟ್ಟಿಗೆ ಅರ್ಥವಾಯ್ತಲ್ಲ ನಿಮಗೆ ... ಸ್ವಲ್ಪ ಇರಿ, ಒಲೇಲಿ ಬೆಂಕಿ ಇದ್ದರೆ ಕಾಫಿ ಗೀಫಿ........"

"ಏನೂ ಬೇಡಪ್ಪ. ನನ್ನ ಕೆಲಸ ಆಯ್ತು. ಇಂದಾ ....ಬರ್ತೀನಿ...."

ನಾನು ಕೊಟ್ಟ ಇನ್ನೊಂದು ರೂಪಾಯನ್ನು ತೃಣಸಮಾನವಾಗಿ ಭಾವಿಸಿ ನಿಧಾನವಾಗಿ ಕಿಸೆಗೇರಿಸಿ ಅವನು,

"ಸರಿ. ಹೋಗುವಾಗ ದಯಮಾಡಿ ಗೇಟು ಮುಚ್ಚಿಕೊಂಡು ಹೋಗಿ. ದನಗಳು ಬಂದು ಹೂ ಗಿಡಗಳನ್ನ ಮೇದುಬಿಟ್ಟಾವು ... ...ತೋಟದ ಜವಾಬ್ದಾ ರಿಯೂ ನನ್ದೇ. ......ಹಿ ಹಿ ಹಿ ......'' ಅಂದ ಗೌರವದಿಂದ.

—ಪುಂಗನೂರು ಪಾಪಯ್ಯ.



ನೋಡಿ ಅಂಪ್ರೆ—ನನ್ನ ದುರದೃಷ್ಟಾನ—

ಈವಾಗ ಮಂತ್ರಿ ಆಗಿ ಚುನಾಯಿತರಾಗಿದ್ದಾರಲ್ಲ—-

—ಅವರಿಗೇ ನನ್ನ ಕೊಡಬೇಕೆಂತಿದ್ದರು— ಆದರೆ ಆ ಖಾದಿ ಜುಬ್ಬ ನೋಡಿ ನಮ್ಮಪ್ಪ ಹಿಂತೆಗೆದರು.

ಬಂಡವಾಳದ ಮುನ್ನಡೆ

ಇಂದು 120 ಲಕ್ಷ ಕನ್ನಡಿಗರಿಗೆ ಸಂಪೂರ್ಣ ಜವಾಬ್ದಾರಿ ಸರ್ಕಾರ ಲಭಿಸಿದೆ. ಉಳಿದ ನಿಜಾಂ ಪ್ರಾಂತದವರಿಗೂ ಇಷ್ಟರಲ್ಲೇ ತಮ್ಮ ಹಣೆಯ ಬರಹವನ್ನು ತಾವೇ ತಿದ್ದಿಕೊಳ್ಳುವ ಹೊಣೆಗಾರಿಕೆ ದೊರೆಯುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ, ಕನ್ನಡ ನಾಡಿನ ಹಿತಚಿಂತಕರೆಲ್ಲರೂ ಮುಂದಿನ ದಶಕದ ಕಾರ್ಯಕಲಾಪಗಳ ಬಗ್ಗೆ ತೀವ್ರವಾಗಿ ಮಿದುಳನ್ನು ಮಥನಮಾಡಬೇಕಾದ ಅವಶ್ಯಕತೆ ತಲೆದೋರು ತ್ತಿದೆ. ನಾಳಿನ ಸ್ವತಂತ್ರ ಸುವರ್ಣಯುಗದಲ್ಲಿ ಕನ್ನಡಿಗರೆಲ್ಲರಿಗೂ ವಿದ್ಯೆಯೂ ಸಂಪತ್ತೂ ಒಟ್ಟಿಗೆ ಕೂಡಿ ಬರುವುದರಲ್ಲಿ ಅನುಮಾನವೇ ಇಲ್ಲ. ವ್ಯಾಪಾರಗಾರ ರಿಗೂ ಕಾರ್ಖಾನೆಗಳನ್ನು ಸ್ಥಾಪನೆಮಾಡುವವರಿಗೂ ಬಂಡವಾಳವನ್ನು ಹೊಸ ಉದ್ಯಮಗಳಲ್ಲಿ ವಿನಿಯೋಗಿಸುವವರಿಗೂ ಮುಂದಿನ ಕರ್ನಾಟಕದ ಆಗುಹೋಗುಗಳ ಅರಿವಿದ್ದರೆ ಕ್ಷೇಮ. ಅವರಿಗೆ ಸಲಹೆ ಈಯುವುದೇ ಈ ಲೇಖನದ ಉದ್ದೇಶ. ಇನ್ನುಮೇಲೆ, ವರ್ಷಕ್ಕೆ ಸಾವಿರ ಶಾಲೆಗಳಂತೆ ಕುಪ್ಪಳಿಸುತ್ತ ಏರುತ್ತಿ ಬಲವಂತ ಸರ್ವತೋಶಿರ ವಿದ್ಯಾಪ್ರಚಾರ. ಇದರಿಂದ, ಪ್ರಥಮತಃ, ಮಾದಕದ್ರವ್ಯಗಳ ಮಾರಾಟ ತುಂಬ ಹೆಚ್ಚುವುದರಲ್ಲಿ ಸಂದೇಹವಿಲ್ಲ! ಅನಿಷ್ಟಪಕ್ಷ ಒಂದುಕೋಟಿ ಕನ್ನಡಿಗರಾದರೂ ದಿನಕ್ಕೆ ಒಂದು ಪ್ಯಾಕೆಟ್ಟಿಗೆ 'ಸರಾ-ತಪ್ಪು' ಕಡಮೆ ಇಲ್ಲದಂತೆ ಹೊಗೆಯಾಗಿಸುವ ಪರ್ವಕಾಲ ಬರುತ್ತದೆ. ಹೀಗೆ ವರ್ಷವೊಂದಕ್ಕೆ 3650 ಕೋಟಿ ಬತ್ತಿಗಳು ತಯಾರಾಗಿ ಜನರ ಅಧರಮಧ್ಯದಲ್ಲಿ ರಾರಾಜಿಸುವಂತಾಗಲು 5 ಭಾರಿ ಸಿಗರೇಟು ಕಾರ್ಖಾನೆಗಳೂ, ಎರಡು ರೊಟ್ಟಿನ ಪೆಟ್ಟಿಗೆ ಕಾರ್ಖಾನೆಗಳೂ ಹೊಗೆ ಸೊಪ್ಪು ಹಾಗೂ ಸಿಗರೇಟಿಗೆ ಅತ್ಯವಶ್ಯಕವಾದ ಇತರ ಕಸ ಕಡ್ಡಿಗಳ ಬೆಳೆಯೂ, ಬೆಂಕಿ ಪೊಟ್ಟಣ ಕಾರಾಗಾರಗಳೂ, ಹೃದಯರೋಗನಿವಾರಣೆಯ ಔಷಧಿಗಳ ತಯಾ ರಿಕೆಯೂ, ನಮ್ಮ ದೇಶಕ್ಕೆ ಬೇಕಾಗುತ್ತವೆ. ಆಯಾ ಕಂಪನಿಯ ಬತ್ತಿಗಳನ್ನು ಹೆಂಗಸರ ಚಿತ್ರಗಳೊಡನೆ ಹೊಗಳಿ, ಇತರ ಎಲ್ಲ ಬಗೆಯ ಬತ್ತಿಗಳನ್ನೂ ಕಪಿಕರಡಿ ಗಳ ಚಿತ್ರಸಹಿತ ತೆಗಳುವ ಸಾಹಿತ್ಯವನ್ನು ರಚಿಸುವ ವಣಿಗ್ ಸಾಹಿತಿಗಳೂ, ಅವರ ಮಾತಿಗೆ ಪುಷ್ಟಿಕೊಡಬಲ್ಲ ಕಲೋಪಾಸಕರೂ, ಅಚ್ಚೊತ್ತುಗರೂ, ತಂಡೋಪ ಭಂಡರಾಗಿ ಈ ಕಾರ್ಯಕ್ಕೆ ನೆರವಾಗಬೇಕಾಗಿದೆ. ಸುಮಾರು ಒಂದೂವರೆ ಲಕ್ಷ ಜನಕ್ಕೆ ಈ ಕಸಬಿಂದ ಹಣ ಶೇಖರವಾಗುವುದು. ಬೀಡಿಗರ ಸಂಖ್ಯೆ ಕಡಮೆಯಾಗಿ, ಸಿಗರೇಟೇ ಸರ್ವವ್ಯಾಪಿಯಾಗುವುದು.

ವಿದ್ಯಾಪ್ರಚಾರ ಹೆಚ್ಚಿ, ಲಕ್ಷಾಂತರ ಪದವೀಧರರು ನಮ್ಮ ದೇಶದಲ್ಲಿ ಓಡಾಡುತ್ತಿದ್ದರೆ, ವಿದೇಶೀ ಮಾದಕ ದ್ರಾವಕಗಳು ಆ ಜನರಿಗೆ ಹೆಚ್ಚು ರುಚಿಸು

ವುದು. ಈಗಿನ ನಮ್ಮ ಅನುಭವದಿಂದ ನಾವು ಈ ಮಾತನ್ನು ಧಾರಾಳವಾಗಿ ಹೇಳಬಹುದಾಗಿದೆ. ಬುರುಡೆಗಳೊಳಗೆ ತುಂಬಿ, ಮುಂದಾನನ ಹಾಕಿಕೊಂಡು, ಬಾಯಿಗಿಟ್ಟುಕೊಳ್ಳುವ ಅವಿದ್ಯಾವಂತರ ತಂಡವು ಕಡಮೆಯಾಗಿ, ಶ್ರೀಮಂತವಿದ್ಯಾವಂತರಿಗೆ ಮಾತ್ರ ಪ್ರವೇಶವಿರುವ ಕ್ಲಬ್ಬುಗಳಲ್ಲಿ ಸೇರಿಕೊಂಡು, ಸೋಫಾಗಳಲ್ಲಿ ಒರಗಿ, ಸೀಸೆಗಳಿಂದ ಬಗ್ಗಿಸಿಕೊಂಡು ಬಾಯಿ ಚಪ್ಪರಿಸುತ್ತ ಹೀರುವ ಆಧುನಿಕ ಹುಳಿಗಳಿಗೆ ಇನ್ನು ಮುಂದೆ ಆದರಗೌರವಗಳು ಹೆಚ್ಚುತ್ತವೆ. ಪಾನನಿರೋಧ ತಂತ್ರದಿಂದ ಇಂಥ ಅಮೃತಪಾನೀಯಗಳು ಕನ್ನಡಿಗರಿಗೆ ಸಿಗದಿದ್ದಲ್ಲಿ, ಅವುಗಳನ್ನೇ ಹೋಲುವ ಅಮೃತ ಪಾನೀಯಗಳನ್ನು ನಾವು ಕನ್ನಡನಾಡಿನಲ್ಲೇ ಗುಪ್ತವಾಗಿ ತಯಾರಿಸಿ ಗುಟ್ಟಿನಲ್ಲೇ ಮಾರಿ ವಿದ್ಯಾವಂತರ ವಿನಯವನ್ನು ಕೆಡಿಸಬೇಕಾಗುತ್ತದೆ. ಇದಕ್ಕಾಗಿ ಬಂಡವಾಳಗಾರರು ಈಗಿನಿಂದ ಹವಣಿಸಬೇಕಾಗುತ್ತದೆ. ಅಮೇರಿಕಾದಿಂದ ಪಳಗಿದ ಚೋರರನ್ನು ತರಿಸಿ, ಗುಪ್ತಪಾನ ಕ್ರಮವನ್ನು ಕಲಿಯಬೇಕಾಗುತ್ತದೆ.

ವಿದ್ಯೆಯ ಸಂಗಡಲೇ ದೇಹಾಲಂಕಾರ ಸಾಮಗ್ರಿಗಳ ಉಪಯೋಗವೂ ಹೆಚ್ಚಿ, ಅದರ ಗುರುತಾಗಿ, ತರುಣ ತರುಣಿಯರ ಮುಖಮೂತಿಗಳ ಮೇಲೆ ಬೆಳಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈಗಂತೂ, ಹುಡುಗಿಯರಂತೆ, ಹುಡುಗರೂ ಕೂಡ ಮುಖಕ್ಕೆ ಪೌಡರ್ ಹಚ್ಚಿ, ತಲೆಗೆ ತೈಲ ಸವರಿ, ಉಗುರಿಗೆ ರಂಗು ಬಳಿದು, ಕತ್ತಿಗೆ ಚಿನ್ನದ ಸರ ತೊಟ್ಟು, ಬಣ್ಣದ ಚಪ್ಪಲಿಗಳನ್ನು ಧರಿಸಿ, ಬಳುಕುತ್ತ ವಾಲುತ್ತ ನಡೆಯುವ ಕಾಲ ! ಇಂಥವರನ್ನೇ ಮುಂದಿನ ಪೀಳಿಗೆಯವರೂ ಅನುಕರಿಸುತ್ತಾರೆಂಬುದರಲ್ಲಿ ಸಂದೇಹವಿಲ್ಲ ಪರಂಗಿಯವರಂತೆ ಉಡುಪನ್ನು ಧರಿಸುವುದರಿಂದ ಹ್ಯಾಟು, ಕಾಲರು, ಕಾಲರುಗುಂಡಿ, ಟೈ, ಟೈಪಿನ್ನು, ಬನೀನು, ಷರ್ಟು, ವೇಸ್ಟು, ಕೋಟು, ಕರ್ಚಿಫ್, ನಿಕ್ಕರು, ಷರಾಯಿ, ಬ್ರೇಸಸ್ಸು, ಬೆಲ್ಟು, ಕಾಲುಚೀಲ, ಸ್ಟ್ರಾಪು, ಬೂಟ್ಸು, ಬೂಟು ಪಾಲಿಷ್, ಬೂಟ್‌ಲೇಸು, ಕಫ್‌ಲಿಂಕ್ ಇತ್ಯಾದಿ ಹಲವಾರು ಸಾಮಾನುಗಳ ವ್ಯಾಪಾರ ಇವರಿಗೆ ಬಿರುಸಾಗಿ ನಡೆಯುತ್ತಿತ್ತು. ಇದೇ ತೆರನ ವ್ಯಾಮೋಹ ಕನ್ನಡನಾಡಿನ ಕೆಲಭಾಗಗಳಲ್ಲಿ ಅಧಿಕಾರಿಗಳ ಮೇಲು ಪಂಕ್ತಿಯ ಪ್ರೇರಣೆಯಿಂದ, ಇನ್ನೂ ಎಂಟು ಹತ್ತು ವರ್ಷಗಳ ಕಾಲ ಉಳಿಯಬಹುದು ಆದರೂ, ಅದನ್ನೇ ನಂಬಿ ವ್ಯಾಪಾರಸ್ಥರು ಬಂಡವಾಳವನ್ನು ಅತ್ತಕಡೆ ಧೈರ್ಯವಾಗಿ ಹರಿಸುವಂತಿಲ್ಲ. ಮಿಕ್ಕಕಡೆಗಳಲ್ಲಿ ಉತ್ತರ ಭಾರತದ ನಿಲುವಂಗಿ ಷರ್ವಾನಿಗಳ ಪ್ರಸಾದ ಇನ್ನೂ ಹೆಚ್ಚುತ್ತದೆಯಾದ್ದರಿಂದ, ಈಗಿನದಕ್ಕಿಂತ ಹೆಚ್ಚು ಗುಂಡಿಗಳನ್ನು ಮಾತ್ರ ತಯಾರಿಸಿದರೆ, ನಷ್ಟದ ಭಯವಿಲ್ಲ

ಹಾಗೆಯೇ, ವಿದ್ಯಾವಂತ ಕನ್ನಡಿತಿಯರಲ್ಲಿ ಅವರು ನಮ್ಮ ಶಾಲೆಗಳಿಂದ ಹೊರಬೀಳುತ್ತ ಏಳುತ್ತ ಸಿನಿಮ ತಾರೆಯರನ್ನು ಅನುಸರಿಸುವ ಬುದ್ಧಿ ವ್ಯಾಪಿಸಿ, ಕೈಚೀಲಗಳೂ ಮಿರುಮಿರುಗುವ ಸೀರೆ ಕುಪ್ಪಸಗಳೂ ಲವ್‌ಲಕ್ಕುಗಳೂ ದಜನ್ ಗಟ್ಟಲೆ ಬಳೆಗಳೂ ತುಟಿ ಬಣ್ಣ ಕೆನ್ನೆ ಬಣ್ಣಗಳೂ ಕೃತಕದಂತಗಳೂ ಟೋಪಸ್

ಗಳೂ ಹೆಚ್ಚು ಪ್ರಮಾಣದಲ್ಲಿ ಖರ್ಚಾಗುತ್ತವೆ. ಇಂಥ ಗಿಲೀಟ್ ಸಾಮಾನುಗಳ ಕಾರ್ಖಾನೆಗಳು ಕನ್ನಡಕ್ಕೆ ಎಂಟು ಹತ್ತಾದರೂ ಬೇಕೇಬೇಕು.

ವಿದ್ಯಾವಂತರ ಮೊದಲ ಹೊರ ಚಿಹ್ನೆ — ಪಾದರಕ್ಷೆ; ಎರಡನೆಯದು, ಕ್ರಾಪು. ಆದ್ದರಿಂದ, ಲಕ್ಷೋಪಲಕ್ಷ ವರಾನ್ ಚಪ್ಪಲಿಗಳು ಮುಂದಿನ ಹತ್ತು ವರ್ಷಗಳಲ್ಲಿ ನಮಗೆ ಅತ್ಯವಶ್ಯಕ. ಒಂದು ಚಪ್ಪಲಿಯ ಆಯುಸ್ಸನ್ನು ಈಗ ನಾವು ಆರು ತಿಂಗಳಿಂದ ಎರಡು ತಿಂಗಳಿಗೆ ಇಳಿಸಿ ಪ್ರಗತಿ ಹೊಂದಿದೇವೆಯಾದ್ದರಿಂದ, ವರ್ಷಕ್ಕೆ $1\frac{1}{2}$ ಕೋಟಿ ಪಾದರಕ್ಷೆಗಳಾದರೂ ಕನ್ನಡ ಕಾಲಿಗೆ ಬೇಕಾಗುತ್ತದೆ ಇದಕ್ಕೆ ಬೇಕಾದ ರೊಟ್ಟುಗಳನ್ನು ತಯಾರಿಸುವ ಸಲುವಾಗಿ 5 ಕಾರ್ಖಾನೆಗಳನ್ನಾದರೂ ನಾವು ಸ್ಥಾಪಿಸಬೇಕು. ಪಾಲಿಷ್ ವಗೈರೆಗಾಗಿಯೇ ಸುಮಾರು 20 ಲಕ್ಷ ಬಂಡವಾಳವನ್ನು ಚೆಲ್ಲಬಹುದು.

ಸಿನಿಮ ಹುಚ್ಚು, ವಿದ್ಯಾಭ್ಯಾಸದ ಪ್ರಥಮ ಜಾಡ್ಯ ; ವಾಸಿಯಾಗದ ಜಾಡ್ಯ. ಕನ್ನಡದವರಿಗೆ ಈಗಿರುವ ತಮಿಳು ತೆಲುಗು ವ್ಯಾಮೋಹ ಇನ್ನು ಹತ್ತುವರ್ಷಗಳಲ್ಲಿ ಕೊಂಚವೂ ಕಡಮೆ ಆಗುವುದಿಲ್ಲ ; ಇನ್ನೂ ವಿಷಮಿಸುತ್ತಲೇ ಇರುತ್ತದೆ. ಅಲ್ಲದೆ, ಕೇಂದ್ರ ಭಾಷೆಯಾಗಿರುವ ಹಿಂದಿಯೇ ಕನ್ನಡಿಗರ ಕಣ್ಣಾದರೂ ಆಗಬಹುದು. ಆದ್ದರಿಂದ, ಕನ್ನಡ ಚಿತ್ರಕಾರರು ಆದಷ್ಟುಬೇಗ ಆಂಗ್ಲ ಚಿತ್ರಗಳನ್ನು ಅಸ್ತವ್ಯಸ್ತವಾಗಿ ಹಿಂದೀಕರಿಸಿ ತೆಲುಗು ತಾರೆಯರನ್ನು ತರಿಸಿ ಕನ್ನಡ ಸ್ಟುಡಿಯೋಗಳಲ್ಲಿ ಅವಕ್ಕೆ ತಮಿಳು ಅಶ್ಲೀಲ ಬೆರೆಸಿ, ಸೆನ್ಸಾರ್ ಬೋರ್ಡಿನವರ ಕಣ್ಣಿಗೆ ಬೆಣ್ಣೆ ಸವರಿ, ಸಿದ್ಧಪಡಿಸುವುದೇ ಜಾಣತನದ ಗುರುತು, ಲಾಭಕ್ಕೆ ದಾರಿ

ವಿದ್ಯಾವಂತ ತರುಣರಿಗೆ ತಂದೆ ತಾಯಂದಿರ ಕಾಸನ್ನು ಖರ್ಚುಮಾಡಲು ಪೂರ್ಣಸ್ವಾತಂತ್ರ್ಯವುಂಟು. ಅವರಾಗಿ ಅವರು ಸಂಪಾದಿಸಲು ಮೊದಲು ಮಾಡಿದಾಗ (?) ಅವರು ಹಣವನ್ನು ಅಷ್ಟು ಬಿಚ್ಚುಗೈಯಿಂದ ವೆಚ್ಚಮಾಡಲಾರರು. ಆದ್ದರಿಂದ, ಲಾಭ ಗಳಿಸಬೇಕಾದರೆ, ವಿದ್ಯಾರ್ಥಿಗಳ ಕಿಸೆಗಳಿಂದ ಹಣವನ್ನು ದೋಚಲು ಸಹಾಯಕವಾಗುವ ಚಿತ್ರಗಳನ್ನೇ ಬಂಡವಾಳಗಾರರು ತಯಾರಿಸಬೇಕು ; ಮೂವತ್ತರಮೇಲೆ ಅವರು ಮೀನ ಮೇಷ ಎಣಿಸುತ್ತಾರೆಯೇ ಹೊರತು, ಸಿನಿಮಾಗಳಿಗೆ ಬರುವುದಪರೂಪ. ಆಕರ್ಷಕ ಚಿತ್ರಗಳನ್ನು ಶಾಲಾ ಕಾಲೇಜುಗಳಿಗೆ ತೀರ ಸಮೀಪದಲ್ಲೇ ಮಂದಿರಗಳನ್ನು ಕಟ್ಟಿಸಿ, ಅಲ್ಲಿ ಪ್ರದರ್ಶಿಸಬೇಕು ! ಬೆಳೆಯುವ ವಯಸ್ಸಿನ ಹುಡುಗರಿಗೂ ಹುಡುಗಿಯರಿಗೂ ಮನಮೋಹಕವಾಗಿ, ಕಾಮುಕೆರಳುವ ದೃಶ್ಯಗಳನ್ನೇ ಚಿತ್ರಗಳಲ್ಲಿ ತುಂಬಬೇಕು. ಹಿರಿಯರನ್ನು ಹೀಯಾಳಿಸಿ, ಹರೆಯತನವನ್ನು ಹೊಮ್ಮಿಸುವ ಸನ್ನಿವೇಶಗಳನ್ನೇ ಭರ್ತಿಮಾಡಬೇಕು. ಇದಕ್ಕೆ, ತಕ್ಕ ನಿರ್ದೇಶಕರಿಗೂ ನಿರ್ಮಾಪಕರಿಗೂ ಎಷ್ಟು ಹಣ ತೆತ್ತರೂ ಹೆಚ್ಚಲ್ಲ.

ಹಾಗೆಯೇ, ಸಾಹಿತ್ಯದಲ್ಲೂ ವಿದ್ಯಾವಂತ ವರ್ಧಿಷ್ಣುಗಳಾದ ಯುವಕ ಯುವತಿಯರ ನಾಲಿಗೆಗೆ ಖಾರವಾದ ಕಥೆ ಕಾದಂಬರಿಗಳನ್ನೇ ಬಂಡವಾಳಗಾರರು ಒದಗಿಸಬೇಕಾಗುತ್ತದೆ. ಹಸಿದವರಿಗೆ ಆಹಾರ ಸಾಮಗ್ರಿಗಳ ಪಟ್ಟಿಯನ್ನೊದಗಿಸುವಂತೆ, ತರುಣರಿಗೆ ತಾತ್ಕಾಲಿಕ ಕೃತಕ ತೃಪ್ತಿಯನ್ನೊದಗಿಸುವ ತಂತ್ರವೂ ಲಾಭದ ದೃಷ್ಟಿಯಿಂದ ಗಮನಾರ್ಹವಾದದ್ದೇ. ಧರ್ಮದ ಕಟ್ಟಿಗೆ ಸಿಲುಕಿ ನರಳುವ ಸಭ್ಯರಿಗೂ ಕೂಡ ಕಳ್ಳಕಾಕರ, ಕುಹಕಕಾಮುಕರ, ಬೆಲೆವೆಣ್ಣುಗಳ, ನರಪಿಶಾಚಿಗಳ ಜೀವನ ಚೇಷ್ಟೆಗಳು ಸಿಹಿಯಾಗಿ ತೋರುತ್ತವೆ.

ವಿದ್ಯಾಪ್ರಚಾರದಿಂದ, ಜನರು ಅನೇಕ ವಿಷಯಸುಖಗಳಿಗೆ ಹಾತೊರೆದು, ತತ್ಪರಿಣಾಮವಾಗಿ ಸಾಲಸೋಲಗಳಿಂದಲೂ ರೋಗರುಜಿನಗಳಿಗೂ ಬಿದ್ದು ಒದ್ದಾಡುವ ಪರಿಸ್ಥಿತಿ ಹತ್ತುವರ್ಷಗಳೊಳಗೆ ಕನ್ನಡನಾಡಿನಲ್ಲೆಲ್ಲ ಹಬ್ಬುತ್ತದೆ. ಆದ್ದರಿಂದ ಅಂಥ ಅರಿಷ್ಟಗಳ ತಾತ್ಕಾಲಿಕ ಶಾಂತಿಗಾಗಿ ಗುಳ್ಳೆ ಬ್ಯಾಂಕುಗಳೂ, ಕಳ್ಳ ಟಾನಿಕ್ಕುಗಳೂ, ಈ ನಾಡಿನಲ್ಲಿ ಈಗಿನದಕ್ಕಿಂತ ನೂರರಷ್ಟು ಬೇಕಾಗುತ್ತವೆ. ಈ ದಾರಿಯನ್ನು ಹಿಡಿಯುವ ಬಂಡವಾಳಗಾರರಿಗೂ ನಷ್ಟ ಸಂಭವಿಸುವುದಿಲ್ಲ. ಆಹಾರಕ್ಕಿಂತ ಟಾನಿಕ್ಕುಗಳೇ ಹೆಚ್ಚು ಪ್ರಮಾಣದಲ್ಲಿ ಜನರು ಬೇಡುತ್ತಾರೆ; ಎದೆ ಹಾಲಿಗಿಂತ ಡಬ್ಬಿ ಹಾಲನ್ನೇ ಕನ್ನಡದ ಕೂಸುಮರಿಗಳು ನುಂಗ ಹತ್ತುತ್ತವೆ; ಗುನ್ನಂ ಪಟ್ಟೆ ಪೊಟ್ಟಣಗಳಲ್ಲಿ ಬರುವ ಕಸದ ಚೂರುಗಳನ್ನೇ ಬಿಸ್ಕತ್ತೆಂಬ ನೆಪದಿಂದ, ಪದವೀಧರ ಮಾತಾಪಿತೃಗಳು ಮಕ್ಕಳಿಗೆ ತಿನ್ನಿಸುತ್ತಾರೆ... ಬುದ್ಧಿವಂತರಾದ ಬಂಡವಾಳಗಾರರು ಇತ್ತಕಡೆ ಈಗಲೇ ಗಮನ ತಿರುಗಿಸಿದರೆ, ಒಳ್ಳೆಯದು.

—o—

ಅಜ್ಜನಿಗೆ ಮೊಮ್ಮಗ ಜೈಕಾರ ಕಲಿಸಿದ

* * *

ಅತಿರಥರ ಜೊತೆ ಸೇರಿ ಮಹಾರಥನ ಮಾನ ಹೋಯ್ತು

* * *

ಅರವತ್ತಕ್ಕೆ ಬುದ್ಧಿಬಂತು; ಎಪ್ಪತ್ತಕ್ಕೆ ಅದೂ ಇಲ್ಲ.

* * *

ಅತಿವಿನಯಂ ಗತಿಯಿಲ್ಲದವನ ಲಕ್ಷಣಂ

* * *

ಕೂತ್ಕೊಳ್ಳಲ್ಲಮ್ಮ, ಹೋಗ್ತೀನಿ

ಆಯ್ತೇನ್ರಿ ಊಟ ಕೆಲಸ ಎಲ್ಲ ಸಾಕವ್ನೋರೇ ? ನಿಮ್ಮನೇಲೇನಮ್ಮ ಹನ್ನೊಂದು ಗಂಟೇಗೆಲ್ಲ ಆಗ್ಹೋಗತ್ತೆ. ನಮ್ಮನೆ ಹಾಗೇ ? ಇನ್ನೂ ಮನೇಗೇ ಬಂದಿಲ್ಲ ನೋಡಿ. ಇನ್ನುಮೇಲೆ ನಿಧಾನವಾಗಿ ಬಂದು ಬಟ್ಟೆ ಬದಲಾಯಿಸಿ ಊಟಕ್ಕೇಳೋ ಹೊತ್ತಿಗೆ ಇನ್ನೊಂದು ಸಲ ಅಡಿಗೆ ಮಾಡಿಬಿಡಬಹುದು . . ... ಇಲ್ಲಮ್ಮ ಕೂತ್ಕೊಳೋದಿಲ್ಲ ಹೋಗ್ಬೇಕು.

...... ಆ್ಞ ? ನೆನ್ನೆ ಎಲ್ಹೋಗಿದ್ರಿ ಅಂದ್ರಾ ? ಅಯ್ಯೋ ಎಲ್ಲೂ ಇಲ್ಲ ಕಣ್ರಿ. ಅದೇ, ನಮ್ಮ ದೊಡ್ಡಪ್ಪನ ಮಗಳು ಅಳಿಯ ಚಿಕ್ಕಪೇಟೆಲೆಲ್ಲೋ ಸಂಸಾರ ಹೂಡಿದ್ದಾರಂತೆ, ಅಂತ ಹೇಳಲಿಲ್ಲವೇ ಆವತ್ತು ? ನೆನ್ನೆ ಹೇಗಿದ್ರೂ ಭಾನುವಾರ ರಜ ಇತ್ತಲ್ಲಾ ಇವರಿಗೆ, ಬರ್ತೀಯಾ ಹೋಗೋಣ ಅಂತಂದ್ರು. ಸರಿ ಅಂತ ಹೊರಟೆವು. ನಾನಾಗಿ ಕೇಳಲೇ ಇಲ್ಲಮ್ಮ. ನೀವು ನಿಜ ಹೇಳಿದರೂ ಕೇಳ್ತೀರಿ, ಸುಳ್ಳು ಹೇಳಿದರೂ ಕೇಳ್ತೀರಿ. ಇಷ್ಟು ದಿನ ಆಯಿತು ನೋಡಿ ಒಂದು ದಿನ ಇಂಥಾ ಕಡೆಗೆ ಹೋಗಬೇಕು ಅಂತ ನಾನು ಬಾಯಾರ ಕೇಳಿದ್ದಿಲ್ಲ. ನಿಮ್ಮ ಹಾಗೇನೇ. ಅದೇ ಆ ಮಿಟಕಲಾಡಿ ಕೃಷ್ಣಾಬಾಯಿ ಇದ್ದಾರಲ್ಲ, ಗಂಡನಿಗೆ ರಜ ಬಂತು ಅಂದರೆ ಸಾಕು, “ ಈ ಸಿನಿಮಾಗೆ ಹೋಗೋಣ, ಅ ನಾಟಕಕ್ಕೆ ಹೋಗೋಣ ” ಅಂತಂದು ಪೀಡಿಸಿ, ಮೂಗುದಾರ ಹಾಕಿ ಎಳಕೊಂಡೇ ಹೊರಟ್ಹೋಗ್ತೋತ್ತಾರೆ. ನಾನೂ, ನೀವೂ ಎಂದಿದ್ದರೂ ಒಂದೇ........ಅಯ್ಯೋ ಪರವಾಗಿಲ್ಲರೀ. ಕೂತುಕೊಂಡರೆ ಹೊತ್ತಾಗುತ್ತೆ ಹೋಗ್ಬೇಕು.

.......ಅದೇ ಹೇಳೊಕ್ಕೆ ಹೊರಟೆ. ಹೋಗೋಣ ಅಂತ ಹೇಳಿದ ಕೂಡಲೆ ಅವಸರವಸರವಾಗಿ ಕೆಲಸಗಳನ್ನು ಮಾಡಿಕೊಂಡು, ರಾಘು, ಶುಭಾಗೆ ತಲೆ ಬಾಚಿ, ಬಟ್ಟೆ ಹಾಕಿ ಹೊರಡೋ ಹೊತ್ತಿಗೆ ಮೂರು ಗಂಟೆ ಹೊಡಿಯಿತು. ಒಲೆ ಹೊತ್ತಿಸಿ ಕಾಫಿ ಮಾಡ್ತೀನಿ ಅಂತಂದೆ. ಕೇಳಲಿಲ್ಲ ನಮ್ಮನೆಯವರು. “ ಮೊದಲನೇ ಸಾರಿ ಹೋಗೋದು, ನಿಮ್ಮ ಸುಧಾ ಮಾಡಿಕೊಡೋಲ್ಲವೇ ” ಅಂದರು. ಮಕ್ಕಳಿಗೆ ಅವರ ಮನೆಯಲ್ಲಿ ತುಂಬಾ ಕಾಫಿ ತಿಂಡಿ ಮಾಡಿಕೊಡ್ತಾರೆಂತ ಹೇಳಿ, ಅವರನ್ನು ನಡೆಸಿಕೊಂಡೇ ಹೋದೆವುರೀ, ಎಲ್ಲೋ ಒಂದು ಗೊಂದೀಲಿ ಮಾಡಿದ್ದಾರೆ ಮನೆ. ಪತ್ತೇಮಾಡೋ ಹೊತ್ತಿಗೆ ಒಂದು ಗಂಟೆ ಕಾಲ ಹಿಡಿಯಿತು. ಮನೆಗೆ ಬೀಗ ಮುದ್ರೆ ಬಿದ್ದಿತ್ತು. ಎಲ್ಲೋ ಸಿನಿಮಾಗೆ ಎದ್ಬಿಟ್ಟಿದ್ದರು ಅಂತ ಕಾಣುತ್ತೆ. ಬೀಗ ನೋಡುತ್ತಲೇ, ರಾಘು, ಶುಭಾ ಇಬ್ಬರೂ ಶುರುಮಾಡಿದರು ಜೋಡೀವಾಲಗಾನ. ಹೇಗಪ್ಪ ಇಬ್ಬರನ್ನು ಸಾಗಿಸಿಕೊಂಡು ಮನೇಸೇರೋದು ಅನ್ನಿಸಿಹೋಯ್ತು........ ಕೂತ್ಕೊಳೊಕ್ಕೆ ನೀವಿಷ್ಟು ಹೇಳಬೇಕೇ ? ಹೋಗಬೇಕಲ್ಲ !


……..ಅಲ್ಲಿಂದ ನೆಟ್ಟಗೆ ಮನೆಗೆ ಬಂದಿದ್ದರೆ ಅದೊಂದು ಥರಾ. ಇವರು ಅಷ್ಟೊತ್ತು ಕಾಫಿ ಇಲ್ಲದೇ ಇದ್ದಿದ್ದೆ ಹೆಚ್ಚು – ಹುಡುಗರು ಹೋಟಲಿಗಾದರೂ ಹೋಗೋಣ ಅಂತ ಶುರುಮಾಡಿದರು. ನಾನೊಬ್ಬಳೇ ಬೀದೀಲಿ ಹೇಗೆ ನಿಂತಿರೋದು ಹೇಳಿ. ನಮ್ಮವರ ಮನೆಯೂ ಅಲ್ಯಾವುದೂ ಇರಲಿಲ್ಲ. ಅಷ್ಟು ಜನರ ಮಧ್ಯೆ ಒಳಗೆ ಹೋಗಬೇಕಾದರೆ ತಲೆತಗ್ಗಿನೋ ಹಾಗಾಯಿತು ನೋಡಿ. ಎಲ್ಲರೂ ನನ್ನನ್ನ ನೋಡುತ್ತಾರೇನೋ ಅನ್ನೋಹಾಗಿತ್ತು. ಅದು ಹೇಗೆ ಒಂದು ಲೋಟ ಕಾಫಿ ಕುಡಿದೆನೋಮ್ಮ ಅಯ್ಯೋ ನಂಗೆ ನಿಮಗೆ ಹಾಗಾಗೋದು ಅಷ್ಟೆ. ಈ ಕಾಲದಲ್ಲಿ ಹೋಟಲಿಗೆ ಹೋಗದೇ ಇರೋವರು ಯಾರಿದ್ದಾರೆ ಹೇಳಿ……. . . ನಿಧಾನವಾಗಿ ಬಂದಾಗ ಕೊತ್ಕೊಳ್ತೀನಿ, ನೀವೇನೂ ತಿಳುಕೋಬೇಡಿ.

ಏನೋ ಹೇಳ್ತಾ ಇದ್ದೆನಲ್ಲ, ಓಹೋ ನೆನ್ನೆ ಹೋಟಲಲ್ಲಿ ನನಗೆ ತಿಳಿದವರೇ ಎಷ್ಟುಮಂದಿ ಇದ್ದರೂಂತೀರಿ. ಅವರೆಲ್ಲ ಏನೆಂದುಕೊಂಡರೋ ಏನೋ. ಹಾಳು ಹುಡುಗರ ಹಟ ನಿಲ್ಲಿಸೋಕೆ ಹೋಗಬೇಕಾಯಿತು. ನಾನು ಕೂತಿದ್ದ ರೂಂನಲ್ಲೇ ಒಳ್ಳೇ ದೊಡ್ಡದೊಡ್ಡ ಮುತ್ತೈದೇರು ಐದಾರು ಜನ ಧೈರ್ಯವಾಗಿ ಕೂತುಕೊಂಡು ಕಾಫಿ ತಿಂಡಿ ತಿಂತಿದ್ದರು ನೆನ್ನೆ ನೀವು ಬಂದಿದ್ದಾಗ ಪಂಕಜಮ್ಮ ಬಂದಿರಲಿಲ್ಲವೇ " ನಮ್ಮ ಮಾವನವರ ತಿಥಿ, ಕಲಾಯ ಇರೋ ಪಾತ್ರೆಗಳಿದ್ದರೆ ಕೊಟ್ಟಿರಿ " ಅಂತ ಆಕೆ ಗಂಡ ಲಕ್ಷಣವಾಗಿ ಕೂತುಕೊಂಡು ಇನ್ನು ಒಂದೆರಡು ಮಸಾಲ್ದೋಸೆ ತೊಗೊಂಬಾರಯ್ಯ ಅಂತಂದ್ರು. ತಂದೆ ತಿಥಿ ದಿನ ಒಂದಿವಸ ಹೋಟಲಲ್ಲಿ ತಿಂದೆ ಇದ್ದರೆ ಏನಾಗುತಿತ್ತು, ಈ ಮನುಷ್ಯನಿಗೆ? ಅಷ್ಟಲ್ಲದೇನೇ ಎಲ್ಲರೂ ಅನ್ನೋಕೆ ಶುರುಮಾಡಿದ್ದಾರೆ ನಮ್ಮ ಜನಾನಾ. ಮೊನ್ನೆ ನೀರಿಗೆ ಹೋದಾಗ ಬಟ್ಟೆ ಒಗೆಯುತ್ತಿದ್ದ ತಿಮ್ಮಿಗೆ " ಮೆಲ್ಲಗೆ ಒಗೆಯೇ ಸ್ವಲ್ಪ, ಮೇಲೆಲ್ಲ ಹಾರುತ್ತೆ " ಅಂದಿದ್ದಕ್ಕೆ ಅವಳು " ಬರೀ ಮಾತಿನ ಮಡೀನ ನಾ ಕಂಡಿದ್ದೀನಿ, ಸುಮ್ಮಗೆ ತೊಕೊಂಡೋಗ್ರವ್ವ ನೀರ್ನ " ಅಂದ್ಲು. ಅವಳ ಕೈಯಲ್ಲೂ ಅನ್ನಿಸಿಕೊಳ್ಳೊ ಹಾಗಾಗಿದೆ ನೋಡಿ ನಮ್ಮ ಜನಕ್ಕೆ ಯಾರೋ ಒಬ್ಬಬ್ಬರು ಕುಲಗೆಟ್ಟರೆ ನಮ್ಮ ಜಾತೀಗೇ ಕೆಟ್ಟ ಹೆಸರು ಬರ್ತಾ ಇದೆ ನೋಡ್ರೀ.

ಅಯ್ಯೋ ನಿಮ್ಮಕಮಲು ಸ್ಕೂಲಿಂದ ಆವಾಗ್ಲೆ ಬಂದುಬಿಟ್ಲು. ಎರಡು ಗಂಟೆ ಆಗ್ಹೋಯ್ತು ಆವಾಗಲೇ. ಮಾತಾಡ್ತಾ ಹೊತ್ತೇ ಗೊತ್ತಾಗ್ಲಿಲ್ಲ. ಪಾಪ ನಿಮಗೇನಾದರೂ ಕೆಲಸ ಇತ್ತೋ ಏನೋ, ನಾನು ಅಡ್ಡಿ ಬಂದೆ ಬರ್ತೀನಿ ನಾನು. ಮನೇಲಿ ಎಷ್ಟು ಕೆಲಸ ಬಿದ್ದಿದೆಯೋ ಬಿಡುವೇ ಅಗೋಲ್ಲ. ಹಾಗೇ ಒಂದ್ನಿಮಿಷ ನೋಡ್ಕೊಂಡು ಹೋಗೋಣ ಅಂತ ಬಂದೆ. ಅದೋ ಬಂತೆಲ್ಲ ವಾರಂಟು, " ಅಮ್ಮ, ಅಣ್ಣ ಬಂದ್ರು " ಅಂತ. ಬರ್ಲೇ ನಾನು ?

ಇದೆಲ್ಲ ಏನಮ್ಮ ಸುಮ್ನೆ. ಕುಂಕುಮಕೊಟ್ಟರೆ ಸಾಲದೇ, ಮನೇಗ್ಬಾರೋ ಕೊಡ್ತೀನಿ ನಿಂಗೇ, ಎಲ್ಲಾ ಇಲ್ಲೇನೇ. ಬರ್ತೀನ್ರೀ, ಇನ್ನೊಂದಿನ ಪುರಸೊತ್ತಾಗಿ, ನೀವೂ ಬನ್ನಿ.

—ಸಾವಿತ್ರಮ್ಮ.



ವರ್ಷಾವಧಿ ಹಬ್ಬ ಕಣೊ
ಆ ಬೋರ್ಡಿಗೂ ಒಂದಿಷ್ಟು ಮಾವಿನಸೊಪ್ಪು ಕಟ್ಟೊ—

ಕೂಳು ಚೆಲ್ಲಿದರೆ ಕುಹಕಿಗಳಿಗೇನು ಕಮ್ಮಿ ?

* * *

ತೂಕಡಿಸುವವನಿಗೂ ಹಾಸಿಗೆ, ಥೂ ಅಂದವನಿಗೂ ಹಾಸಿಗೆ.

* * *

ಚಿಟ್ಟೆಗೆ ತಾಂಬೂಲ ಕೊಟ್ಟರೆ, ತಟ್ಟೇನೂ ಕಿತ್ತುಕೊಂಡ.

* * *

ಗಂಟೆಗೊಂದು ಸ್ವರ ; ಗಳಿಗೆಗೆ ಒಂದು ತಾಳ.

* * *

ಪತ್ಯಾಗ್ರಹ

ಸೀತಾದೇವಿಯ ಅಭೀಷ್ಟವನ್ನು ನಿರಾಕರಿಸುತ್ತಾ, ಶ್ರೀರಾಮನು, "ಎಲೌ, ಸೀತಾದೇವಿಯೇ ! ನೀನು ಇದ್ದಲ್ಲೇ ಇದ್ದುಕೊಂಡಿರು. ನಾನು ಹೇಳಿದಂತೆ ಮಾಡು. ಕೇಳು ! ನೀನು ಆಶಿಸುವ ಆ ಪ್ರದೇಶವು ಕೇವಲ ಅರಣ್ಯವು. ಅಲ್ಲಿ ಸಿಂಹ ಶಾರ್ದೂಲಗಳಿವೆ. ಅಲ್ಲಿಯ ನದಿಗಳು ಕೆಸರಿಂದಲೂ ಮೊಸಳೆಗಳಿಂದಲೂ ತುಂಬಿವೆ. ಅಲ್ಲಿ ಮುಂದು ಮುಂದಕ್ಕೆ ಹೋಗಲು ನಿನಗೆ ಪ್ರಯಾಸಕರ. ಉದುರಿದ ಎಲೆಗಳಮೇಲೆಯೇ ಮಲಗಬೇಕಾಗುವುದು. ಎಷ್ಟು ಸಿಕ್ಕಿದರೆ, ಅಷ್ಟರಿಂದಲೇ ತೃಪ್ತಿಪಡೆಯಬೇಕಾಗುತ್ತದೆ. ದೂರಕ್ಕೆ ಕಾಡು ಹಸುರಿಗೆ ಎಂಬಂತೆ ನಿನಗೆ ಅದು ತೋರುತ್ತಿರುವುದು. ಅಲ್ಲಿ ಅತಿಯಾದ ಗಾಳಿ. ಭಯಂಕರವಾದ ಕತ್ತಲೆ. ಈ ಬುದ್ಧಿಯನ್ನು ಬಿಟ್ಟುಬಿಡು. ನಾನು ಈ ಕಷ್ಟಗಳನ್ನೆಲ್ಲ ಚೆನ್ನಾಗಿ ವಿಮರ್ಶಿಸಿ ತಿಳಿದುಕೊಂಡಿರುತ್ತೇನೆ" ಎಂದನು.

ಆಗ ಆಕೆಯು ಆತನ ನುಡಿಗಳನ್ನು ಅಂಗೀಕರಿಸದೆ, ಆತನನ್ನು ಕುರಿತು ಈರೀತಿ ಹೇಳಿದಳು : "ಸ್ವಾಮಿಯೇ ! ನನ್ನ ಸಂಕಲ್ಪವನ್ನು ಉದ್ದೇಶಿಸಿ ನೀನು ಯಾವ ದೋಷಗಳನ್ನು ಹೇಳಿದೆಯೋ, ಅವೆಲ್ಲವನ್ನೂ ಗುಣಗಳನ್ನಾಗಿಯೇ ಭಾವಿಸುವೆನು. ಎಲೈ, ಮಹಾಮತಿವಂತನೆ ! ಆ ಪ್ರದೇಶವು ಎಷ್ಟೇ ಭಯಂಕರವಾಗಿರಲಿ, ನಾನು ಅಲ್ಲಿಗೆ ಬಂದೇ ಬರುವೆನು. ಜಿತೇಂದ್ರಿಯರಲ್ಲದವರು ಅವುಗಳನ್ನು ಕಷ್ಟಗಳೆಂದು ಭಾವಿಸುತ್ತಾರೆ. ನಾನುಮಾತ್ರ ಹಾಗೆ ಭಾವಿಸುವುದಿಲ್ಲ. ನನ್ನ ಆಶೆಯನ್ನೀಡೇರಿಸು. ಇಲ್ಲವಾದರೆ, ವಿಷ ಅಗ್ನಿ ಜಲ ಇವೇ ನನಗೆ ಶರಣ್ಯ !'' ಎಂಬೀ ಪ್ರಕಾರವಾಗಿ ಸೀತಾದೇವಿಯು ಹೇಳುತ್ತಿದ್ದರೂ ಮಹಾ ಭುಜಬಲಪರಾಕ್ರಮವಂತನಾದ ರಾಮಸ್ವಾಮಿಯು ಸಮ್ಮತಿಸದೆ ಹೋದನು. ಆಕೆಯನ್ನು ಬಹಳವಾಗಿ ಸಂತೈಸಿದನು.

ಬಳಿಕ, ಸೀತಾದೇವಿಯು ಆತನನ್ನು ಈರೀತಿ ಹೀಯ್ಯಾಳಿಸಿದಳು : "ಎಲೈ ಸ್ವಾಮಿಯೆ ! ತತ್ವಜ್ಞನಾದ ನಮ್ಮ ತಂದೆ ನಿನ್ನನ್ನು ಆಕಾರಮಾತ್ರದಿಂದ, ಪುರುಷ ರೂಪನಾದ ಸ್ತ್ರೀಯೆಂದರಿಯದೆ ಅಳಿಯನನ್ನಾಗಿ ಭಾವಿಸಿದನೇನು ? ನಿನ್ನನ್ನು ಮಹಾಮಹಿಮನೆಂದು ಭಾವಿಸಿ ನನ್ನನ್ನು ಕೊಟ್ಟು ಮದುವೆಯನ್ನು ಮಾಡಿದ ನಲ್ಲವೆ ?"

ಆಗ, ರಾಮನು "ನಿನ್ನ ಅಭೀಷ್ಟವನ್ನೇ ನೆರವೇರಿಸುವೆನು" **ಇಲ್ಲದಿದ್ದರೆ** ನನಗೆ ಉಳಿಗಾಲವಿಲ್ಲ ಎಂದು ನುಡಿದು ನಡೆದುಕೊಂಡನಂತೆ—

———o———

ಜಾತಕ ಪಕ್ಷಿ

ನಾನು ಕಾಲೇಜಿನಿಂದ ಮನೆಗೆ ಬಂದಾಗ ರಾಜಣ್ಣ ಛಳಿಯೆಂದು ಮಲಗಿದ್ದ. ಅವನ ಮಂಚದ ಮೇಲೆ ಕಂಬಳಿ ಅಥವಾ ಶಾಲು ಕಂಡಿತೆಂದರೆ, ರಾಜಣ್ಣನಿಗೆ ಏನೋ....ಛಳಿಯೋ, ಜ್ವರವೋ, ತಲೆನೋವೋ, ಕಡೆಗೇನಿಲ್ಲದಿದ್ದರೂ ಏಕೋ ಏನೋ ಮೈಗೆ ಸರಿಯಾಗಿಲ್ಲದಿರುವುದೋ. ಬಂದಿದೆಯೆಂದು ನನಗೆ ಗೊತ್ತು. ನನಗೊಬ್ಬಳಿಗೇ ಏನು, ಅವನ ಗೆಳೆಯರಿಗೆಲ್ಲ ಗೊತ್ತು. ಅಷ್ಟೇ ಅಲ್ಲ, ಅವನಿಗೆ ಮೈಲಿ ಸರಿಯಾಗಿಲ್ಲದಿದ್ದರೆ ಅವನಿಗೆ ಯಾರಾದರೂ ಹೆಣ್ಣು ಕೊಡಲು ಬಂದಿದ್ದಾರೆ ಅಥವಾ ಬರಲಿದ್ದಾರೆ ಎನ್ನುವುದೂ ಖಂಡಿತ ಅಂತೆಯೇ ಅಂದೂ ಆಗಿದೆಯೆಂದು ತಿಳಿದೆ.

ವಿಷಯವು ಖಾತರಿಯಾದರೂ ವಿಶದವಾಗಿ ತಿಳಿಯೋಣವೆಂದು ತಂದೆಯವರ ಕೊಠಡಿಗೆ ಹೋದೆ. ಅಲ್ಲಿ ಕುಳಿತಿದ್ದ ಪ್ರಾಣಿಯ ಲಕ್ಷಣಗಳನ್ನು ನೋಡಿದೊಡನೆಯೇ ಅದೂ ಒಂದು ಜಾತಕ ಪಕ್ಷಿಯೆಂದು ನಿರ್ಧರಿಸಿದೆ. ಎಂದೋ ಒಗೆದ ಅಥವಾ ಅಂದೇ ಒಗೆದಿದ್ದರೂ ಯಾವುದೋ ಕೆರೆಯ ಹೊಸನೀರಿನಲ್ಲಿ ಒಗೆದಂತಿದ್ದ ಪಂಚೆ, ತಾಲ್ಲೂಕು ಆಫೀಸು ಲೇಖಣಿದಾರರಂತೆ ಮುಚ್ಚುಕಂಠದ ಕೋಟು, ಮಡಿಕೆಯನ್ನು ತಿರುಗಿಸಿ ತಿರುಗಿಸಿ ಸುತ್ತಿದ್ದರೂ ಇಣಿಕಿನೋಡುವ ಕೊಳೆಯುಳ್ಳ ಪೇಟವಲ್ಲದಿದ್ದರೂ ಪೇಟದಂತೆ ಕಾಣಲು ಕಾತರಿಸುವ ರುಮಾಲು ಇವುಗಳಾವುವು ಇಲ್ಲದಿದ್ದರೂ ಆ ಪ್ರಾಣಿ ಜಾತಕ ಪಕ್ಷಿಯೇ ಇರಬೇಕೆಂದು ತಲೆಗೆ ಹೇಗೋ ಹೊಳೆಯಿತು.

ಆಸಾಮಿ ತಂದೆಯವರೊಂದಿಗೆ ಸಂಭಾಷಿಸುತ್ತಿದ್ದ ಮಾತನ್ನು ಕೇಳಲು ಪೇಪರೋದುವ ನೆವದಿಂದ ಅಲ್ಲೇ ನಿಂತೆ. ಎಂದಿನಂತೆ ಜಾತಕ ಪಕ್ಷಿಗಳು ಕೇಳುವ ಒಂದೇ ವಿಷಯದ ಒಂದೇ ಪ್ರಶ್ನೆ ಜರುಗಿತ್ತು ಸಂಭಾಷಣೆ.... ...

" ಏನೋ ದೊಡ್ಡ ಮನಸ್ಸುಮಾಡಿ ನಮ್ಮ ಹುಡುಗಿಯನ್ನು ತಂದುಕೊಂಡರೆ ನಮ್ಮ ವಂಶ ಪಾವನವಾದಂತೆಯೇ, '' ಆದರೆ ಇದೊಂದು ಮಾತ್ರ ಸರ್ವ ಜಾತಕ ಪಕ್ಷಿಗಳ ಮೂಲ ವಾಕ್ಯ ಎಂದು ಕಾಣುತ್ತದೆ.... ...

ಇದು ಅಣ್ಣನನ್ನು ನೋಡಬಂದ ಹದಿನೈದನೆಯ ಪಕ್ಷಿ...ನನ್ನ ಸೆನ್ಸಸ್ ಪ್ರಕಾರ. ಯಾರೇ ಆಗಲಿ ಮೊದಲು ಕೇಳುವುದು " ತಮ್ಮ ಹುಡುಗನ ಜಾತಕ ದಯವಿಟ್ಟು ಅಪ್ಪಣೆಕೊಡಿಸುತ್ತೀರಾ ?''

" ನಮ್ಮ ಹುಡುಗನಿಗಿನ್ನೂ ವಯಸ್ಸಾಗಿಲ್ಲ, ಓದು ಮುಗಿದಿಲ್ಲ '' ಅಥವಾ " ಈಗಲೇ ಮದುವೆಯಾಗಲು ಇಷ್ಟವಿಲ್ಲ " ಇತ್ಯಾದಿಗಳಲ್ಲಿ ಯಾವುದಾದರೊಂದು

ಸಾಮಾನ್ಯವಾಗಿ ತಂದೆಯವರ ಉತ್ತರ. ಅವರೇನೇ ಹೇಳಲೀ ಅಣ್ಣನ ಜಾತಕದ ಪ್ರತಿಯೊಂದನ್ನು ತೆಗೆದುಕೊಳ್ಳದೆ ಯಾವ ಪಕ್ಷಿಯೂ ಹಿಂದಿರುಗುತ್ತಿರಲಿಲ್ಲ. ನಮ್ಮ ತಂದೆ ಮಗನಿಗೆ ಮದುವೆಮಾಡಲು ಇಷ್ಟವಿಲ್ಲದಿದ್ದರೂ ಬಂದವರಿಗೇನೋ ಜಾತಕ ವನ್ನು ಕೊಟ್ಟು ಕಳುಹುತ್ತಿದ್ದರು. ಆದರೆ ಜಾತಕವನ್ನು ನಕಲು ಮಾಡುವುದು ಪ್ರತಿಸಾರಿಯೂ ಅಣ್ಣನ ಪಾಲಿಗೇ ಬೀಳುತ್ತಿತ್ತು....

ತನ್ನ ಕತ್ತಿಗೆ ತಾನೇ ಉರುಲು ಹಾಕಿಕೊಳ್ಳುವುದರಲ್ಲಿ ಇದೂ ಒಂದು ರೀತಿ ಇರಬೇಕು.

ಅಣ್ಣನಿಗೆ ಜಾತಕವನ್ನು ಕಾಪಿ ಮಾಡಿ ಬೇಜಾರಾಗಿತ್ತು. " ಸುಮ್ಮನೆ ನೂರು ಕಾಪಿಗಳನ್ನು ಅಚ್ಚು ಹೊಡೆಸಿದರಾದರೂ ವಾಸಿ ಬಂದವರಿಗೆಲ್ಲ ಒಂದೊಂ ದನ್ನು ನಿರಾಯಾಸವಾಗಿ ಕೊಡಬಹುದು " ಸಿಟ್ಟಿನಿಂದ ಅವನೆನ್ನುತ್ತಿದ್ದ. ಆದಾಗ್ಯೂ ತನ್ನ ಜಾತಕವನ್ನು ಪ್ರತಿಮಾಡುವ ಕಾರ್ಯವೇನೋ ಯಾವಾಗಲೂ ತಪ್ಪುತ್ತಿರಲಿಲ್ಲ.

ಅನೇಕಜನ ಮಗನನ್ನು ವಿಚಾರಿಸಿದಮೇಲೆ ಮನಸ್ಸಿಲ್ಲದ ತಂದೆಯವರಿಗೂ ಮಗನಿಗೆ ಮದುವೆಮಾಡಬೇಕೆಂಬ ಆಸೆ ಹುಟ್ಟಿತು. ಆದರೆ ಅಣ್ಣ ಒಪ್ಪಬೇಕಲ್ಲ. ಒಂದೊಂದು ಸಲ ಒಂದೊಂದು ನೆಪ ಹೂಡಿ ತಪ್ಪಿಸಿಕೊಂಡ. ಕಡೆಗೂ ತಂದೆ ಯವರು ಗೆದ್ದರು.

ಹೆಣ್ಣಿನವರಾರಾದರೂ ಬಂದಾಗ ಅಣ್ಣನ ಆಟ ಅಷ್ಟಿಷ್ಟಲ್ಲ. ' ಏನೇ ಆಗಲಿ ಈ ಗಂಡು ನಮಗೆ ಬೇಡ ' ಎಂದು ಹೆಣ್ಣಿನವರೆನ್ನುವಂತೆ ಮಾಡುತ್ತಿದ್ದ. ಆದರೆ ಈ ಹದಿನೈದನೆಯವರ ಹತ್ತಿರ ಇವನ ಬೇಳೆಕಾಳೇನೂ ಬೇಯಲಿಲ್ಲ. ಆತ ಎಲ್ಲಕ್ಕೂ ಸಿದ್ಧವಾದಂತೆಯೇ ಬಂದಿದ್ದರೇನೋ

ಈ ಸಲವೂ ಎಂದಿನಂತೆ ಅಣ್ಣನಿಗೆ ಛಳಿ ಬಂತು. ಆತನಿಗಿದು ಗೊತ್ತಾದಾಗ " ನೋಡಿ, ಸದ್ಯದಲ್ಲಿ ನಾನಿರುವುದು ಶ್ರೀರಂಗಪಟ್ಟಣದಲ್ಲಿ, ಅಂದಮೇಲೆ ಮಲೇ ರಿಯಾದೇವಿ ನಮ್ಮ ಮನೆಯವರಲ್ಲಿ ಒಬ್ಬಳೆನ್ನುವುದು ನಿಮಗೆ ಗೊತ್ತೇ ಇರಬೇಕಲ್ಲ. ಆದರೇನಂತೆ. ನಮ್ಮನ್ನು ಬಿಟ್ಟುಹೋದ ಇಂಗ್ಲೀಷಿನವರು ಬಿಟ್ಟುಹೋಗಿದ್ದಾರಲ್ಲ ಸಂಜೀವಿನಿಯನ್ನು " ಎನ್ನುತ್ತ, ಆತ ಜೇಬಿನಿಂದ Concentrated quinine ಮಾತ್ರೆಗಳೆರಡನ್ನು ತೆಗೆದು ಅಣ್ಣನಿಗೆ ಬಲವಂತದಿಂದ ನುಂಗಿಸಿಬಿಟ್ಟರು. ಅಣ್ಣ ನಿಗೇನೋ ವಾಂತಿಯಾದರೂ ಸ್ವಲ್ಪಹೊತ್ತಿನಲ್ಲೇ ಹುಷಾರಾದಂತೆ ಎದ್ದುಬಿಟ್ಟ. ಇದು ಆತನ ಪ್ರಥಮ ವಿಜಯ ...ಆದರೆ ಅಣ್ಣನ ಸೋಲಿನ ಕಾರಣ quinine ರಾಕ್ಷಸನ ಭಯವೇ ಇರಬೇಕು.

ಮಾರನೆಯ ದಿನವೂ ಆತ ಸಂಧಾನಕ್ಕೆ ಬಂದರು. ಮಾತಿಗೆ ಮುಂಚೆ ಅಣ್ಣನ ಕೊಠಡಿಗೆ ಕಾಲಿಟ್ಟರು ರಾಜಣ್ಣನ ಮೇಜಿನ ಮೇಲಿದ್ದ ಸಿನಿಮಾ ತಾರೆಯರ ಮೇಲೆ ಹೋಯಿತು ಆತನ ದೃಷ್ಟಿ. ಒಬ್ಬರನ್ನೆತ್ತಿಕೊಂಡು " ನಮ್ಮ ಅಮ್ಮಯ್ಯ

ನಿಗೂ ಈ ಚಿತ್ರಗಳೆಂದರೆ ಬಹಳ ಇಷ್ಟ ....ನೋಡಿದಿರಾ ಜೋಡಿ ಹೇಗೆ ಸರಿ ಕೂಡುತ್ತದೆ '' ಎಂದರು. ಅಂದರೆ ಈತ ಅಣ್ಣನ ಭಾರೀ ಮಾವ ...ನಮಗೆ ಇದು ಆತ ತಗುಲಿಸಿದ ಮೊದಲ 'ಶಾಕ್'. ಅಣ್ಣನ ಮೋರೆ ಸಿಟ್ಟಿನಿಂದ ಕೆಂಪಾಗಿತ್ತು.

ಆಮೇಲೆ ಆತನ ಕೈಗೆ ಅಣ್ಣನ ಒಂದೆರಡು ಬರಹಗಳೂ ಸಿಕ್ಕಿದುವು. ಆತ ಸಂತೋಷದಿಂದ ಕೂಗಿದರು " ನೋಡಿದಿರಾ ನಿಮ್ಮ ಹುಡುಗನೂ ಪತ್ರಿಕೆಗೆ ಬರೆಯುತ್ತಾನೆ. ಅದೂ ' ಶಕುಂತಲ ' ಎಂಬ ಹೆಸರಿನಿಂದ. ನಮ್ಮ ಅಮ್ಮಯ್ಯನೂ ಅಷ್ಟೆ. ' ದುಷ್ಯಂತ ' ಎನ್ನೋ ಹೆಸರಿನಿಂದ ಬರೀತಾಳೆ ನೋಡಿದಿರಾ ಜೋಡಿ ......" ಎಂದು ಅಣ್ಣನ ಬೆನ್ನನ್ನು ತಟ್ಟಿದರು. ಆಗ ಅಣ್ಣ ಏನನ್ನೋ ನುಂಗಲು ಯತ್ನಿಸಿದುದು ನನಗೆ ಕಂಡಿತು.

ಊಟಮಾಡುವಾಗ ಆತ ಅವರ ಅಮ್ಮಯ್ಯನಿಗೂ, ಅಣ್ಣನಿಗೂ ಇದ್ದ ಸಾಮ್ಯತೆಯನ್ನೇ ಎತ್ತಿತೋರಿಸುತ್ತಾ " ನೋಡಿದಿರಾ ಜೊತೆ ಹೇಗಿದೆ ..ಇದನ್ನು ಕಂಡರೆ ನನಗೆ ಹೈಸ್ಕೂಲಿನಲ್ಲಿ ಓದಿದ Chemistry ಜ್ಞಾಪಕಕ್ಕೆ ಬರುತ್ತದೆ .... ಜೊತೆ ಎಂದರೆ ಹಾಗಿರಬೇಕು. ಏನಯ್ಯ ನಿನ್ನ ಅಭಿಪ್ರಾಯ ?" ಅಣ್ಣನ ಕಡೆಗೂ ತಂದೆಯ ಕಡೆಗೂ ತಿರುಗಿ ಹೇಳಿದರು. ಇಷ್ಟುಹೊತ್ತಿಗೆ ಆತ ತಂದೆಯವರ ಹಳೆಯ ಗೆಳೆಯನೆಂದೂ, ಅಣ್ಣನು ಮಗುವಾಗಿದ್ದಾಗ, ಅವನನ್ನು ಅಂಗೈಮೇಲೆ ಆಡಿಸಿದ್ದರೆಂದೂ ನನಗೆ ಗೊತ್ತಾಗಿತ್ತು.

" ಹೌದು ಹೌದು, ಒಂದೇ ತರಹ, ಇಬ್ಬರ Physical properties ಊ. ಆದರೆ Chemical properties ಹೇಗೋ ಕಾಣೆ. ಆದರೂ ನನಗೇನೋ ಸದ್ಯದಲ್ಲೇ ಮದುವೆಯಾಗಲಿಷ್ಟವಿಲ್ಲ '' ಅಣ್ಣ ಮೆಲ್ಲಗೆ ಹೇಳಿದ.

ಬಾಯಿಯೊಳಹೋಗಲು ಹೊರಟಿದ್ದ ತುತ್ತು ಆತನ ಎಲೆಯಮೇಲೇ ಬಿತ್ತು. ಆತ ನಗುತ್ತಾ ಹೇಳಿದರು " ನಮ್ಮ ಅಮ್ಮಯ್ಯನೂ ಅಷ್ಟೇ. ನನಗೆ ಮದುವೆಯೇ ಬೇಡ ಎನ್ನುತ್ತಾಳೆ. ಅದಕ್ಕೇ ನಾನು ನಿಮ್ಮ ಜೋಡಿ ಲಾಯಖ್ಖಾಗಿದೆ ಎಂದದ್ದು ! ಏನು ಶಾಮಣ್ಣ, ಮುಂದಿನ ಮಾಘದಲ್ಲಿ ತಾನೇ ಲಗ್ನ... ... ಅಪ್ಪಣೆ ಕೊಡಿಸು " ಅಣ್ಣನ ತಲೆ ತಗ್ಗಿಸಿಕೊಂಡಂತೆಯೇ ಇತ್ತು. ಆದರೂ ಮುಖದಲ್ಲಿ ಕಿರುನಗೆ ಹೊರಟಿತ್ತು .. ...

ಅಂತೂ ವಿಮಲ ಉರುಫ್ ಅಮ್ಮಯ್ಯ ನನ್ನ ಅತ್ತಿಗೆಯಾದಳು. ಅಮ್ಮಯ್ಯನ Properties ಗೂ ಅಣ್ಣನ properties ಗೂ ಸಂಬಂಧವಿಲ್ಲವೆಂದು ' ಈಗ ' ನಮಗೆಲ್ಲ ಗೊತ್ತು....

....ಸಾವಿರ ಸುಳ್ಳು ಹೇಳಿದರೆ ತಾನೇ ಒಂದು ಮದುವೆ:

....ಹೊನ್ನಮ್ಮ ಎಚ್. ಮೂರ್ತಿ.

ಇಂತೀ ನಮಸ್ಕಾರ

"ಶನಿ" ಮಾಲೂರು
20-10-47

ಶೀರ್ಘರೂಪ ಸ|| ರಾದ ಅಣ್ಣನವರ ಪಾದಪದ್ಮಂಗಳಿಗೆ
ಬಾಲಕ ಗುಂಡನು ಮಾಡುವ ನಮಸ್ಕಾರಗಳು—

ಅಣ್ಣ, ನೀನು ಮನ್ನೆ ಊರುಬಿಟ್ಟು ಹೋದೊಡನೆಯೇ ಗರುಡೀಮನೆ ಪಾಪಣ್ಣ ಬಂದಿದ್ದ ಬಂದವನೇ, ಶಾಮಣ್ಣನವರೆಲ್ಲಿ ? ಎಂದು ಕೇಳಿದ ... ... ನಾನು, ನೀನು ಊರಿಗೆ ಹೊರಟುಹೋದೆ ಎಂದು ಹೇಳಿದೆ ಅದಕ್ಕೆ ಅವನು "ಹಾಗೇನು, ಬದುಕಿಕೊಂಡ .. ....ಇನ್ನೊಂದು ಸಾರಿ ಸಿಗಲಿ" ಎಂದು ಕೂಗಿ, ಗುಟುರು ಹಾಕಿ ಹೊರಟು ಹೋದ. ನಾನು ಸುಮ್ಮನಿದ್ದೆ.

ಎದ್ರುಮನೆ ಭೀಮಣ್ಣನವರು ನಿನ್ನ ಕೇಳಿದರು. ಯಾವುದೋ ದುಡ್ಡು ವಿಚಾರದಲ್ಲಿ ನಿನ್ನ ನೋಡಬೇಕಿತ್ತಂತೆ. ಆಗಲೇ ವಾಯಿದೆಯಾಗಿ 3 ತಿಂಗಳಾಯಿತು ಎಂದುಕೊಂಡು ಹೊರಟು ಹೋದರು.

ಈ ದಿನ ಅತ್ತಿಗೆಯವರಿಂದ ಕಾಗದ ಬಂದಿದೆ. ನೀವಾಗಿ ನೀವು ಹೋಗಿ ಕರೆದುಕೊಂಡು ಬಂದರೆ ಚೆನ್ನಾಗಿರುತ್ತೆಂದೂ, ಇನ್ನು ಮುಂದಕ್ಕೆ ಹೆರಿಗೆಗೆ ಏನು ಮಾಡಿದರೂ ತೌರುಮನೆಗೆ ಅವರು ಕರೆದುಕೊಂಡು ಹೋಗುವುದಿಲ್ಲವೆಂದೂ........ ಚೆನ್ನಾಗಿ ಬುದ್ಧಿ ಬಂತೆಂದೂ ನಾಳೆ ನಾಳಿದ್ದರಲ್ಲಿ ನೀವು ಅಲ್ಲಿಗೇ ಹೋಗದಿದ್ದಲ್ಲಿ ಅತ್ತಿಗೆಯವರನ್ನ, ಮಗೂನ್ನ ಅಲ್ಲಿ ರೈಲು ಹತ್ತಿಸಿಬಿಡುತ್ತಾರೆಂದು ಬರೆದಿದ್ದಾರೆ. ಅದಕ್ಕೆ ನಿನಗೆ ಕಾಗದ ಬರೀ ಅಂತ ಅಪ್ಪ ಹೇಳಿದರು.

ನೀನು ಹೋಗುವಾಗ ಅಪ್ಪನ ಜೇಬಿನಲ್ಲಿ 6 ರೂಪಾಯಿ ತೆಗೆದುಕೊಂಡು ಹೋದೆಯಾ ? ಬಹಳವಾಗಿ ಬೈಯ್ದರು. ನಾನು ಮಾತನಾಡಲಿಲ್ಲ.

ನನ್ನ ಪರೀಕ್ಷೆಯ ರಿಸಲ್ಟು ಈ ದಿನ ಬಂತು....ನನ್ನನ್ನ ಬಿ. ಗ್ರೂಪ್‌ನಲ್ಲಿ ಫೈಲು ಮಾಡಿಸಿದ್ದಾರೆ. ನೀನು ಮಾತ್ರ ತಪ್ಪದೆ ನನಗೆ ಫುಟಸ್ಟೆಪ್ಸ್ ಆನ್ ದಿ ಟೈಂಸ್ ಸ್ಯಾಂಡ್ ಎಂಬೋ ಪುಸ್ತಕ ಕಳುಹಿಸು. ನನ್ನ ಷರಟು ಹರಿದು ಹೋಗಿರುವುದರಿಂದ ನಾನು ಈದಿನ ಲೆಕ್‌ಚರ್‌ಗೆ ಹೋಗಲಿಲ್ಲ.

ಇಲ್ಲಿ ರೇಷನ್ ಸಿಕ್ಕುವುದು ತುಂಬಾ ಕಷ್ಟವಾಗಿರುವುದರಿಂದ ಒಂದಿಪ್ಪತ್ತು ಸೇರು ಅಕ್ಕಿ ಕೂಡಲೇ ಕಳುಹಿಸು ಅಂತ ಬರೀ ಅಂತ ಅಮ್ಮ ಹೇಳಿದಳು. ನಾನು ಹ್ಯಾಗೋ ಅದನ್ನ ಅಲ್ಲಿಂದ ತಂದುಬಿಡುತ್ತೇನೆ.

ನೀನು ಮಾತ್ರ ನಾಳೆಯೇ ನನಗೆ ಅಲ್ಲಿಗೆ ಅದಕ್ಕಾಗಿ ಬರಲು 2-4-0 ರೂ. ಮಣಿಆರ್ಡರು ಮಾಡು. ಮನ್ನೆ ಲಾಟಿ ಚಾರ್ಜಾಗಿ ನನ್ನ ಮೈಕೈನೋವು ಇನ್ನು ಬಿಟ್ಟಿಲ್ಲ. ಇಂತೀ ನಮಸ್ಕಾರಗಳು.

ನಿನ್ನ ಪ್ರೀತಿಪಾತ್ರ
ಗುಂಡಣ್ಣ.

ಮೋಸ ಹೋದೆ

ಎನ್ನನತಿ ಕಿರಿದುಮಾಡಲು ದೇವ ನೀನು
ಏಳು ಸಾಗರಗಳನು ಈಜಿಸಿರುವೆ !
ಎನ್ನಹಂಕಾರವನು ಹಂಗಿಸಲು ನೀನು
ದಶಮದಲಿ ಒಂದಾಗಿ ಕೂರಿಸಿರುವೆ !

ಅತಿಜಾಣನೆಂದುನಾ ಗರ್ವಿಸದೆ ನಡೆವಂತೆ
ಧೀಮಂತ ಗುಂಪಿನೊಳೆ ನಿಲಿಸುತಿರುವೆ !
ಠೇಂಕಾರ ಠಕ್ಕುಗಳ ಹೆಮ್ಮೆಯನು ಮುರಿಯೆ
ಸರಳ ಸಂಸ್ಕೃತರಿಂದ ತಿದ್ದುತಿರುವೆ.

ಲಿನ್‌ಲಿತ್‌ಗೊ ಗರಡಿಯಲಿ ಕಲಿತಿದ್ದ ಪರಸೆಗಳ
ಪಟ್ಟೀಲ ಗರಡಿಯಲಿ ನಡೆಸಲೆಳೆಸಿ
ರೋತಿ ತಾನೂ ಕೆಟ್ಟು ಜನವನ್ನು ಕೆಡಿಸಿತ್ತು !
ಕ್ಷಮಿಸಿ ಕ್ಷಮಿಸೆನ್ನನು ! ಮೋಸಹೋದೆ !


ಮಾಡಿದುದನೆಲ್ಲ ನಾನುಣ್ಣುತಿರೆ ದಿನದಿನದಿ
ಚಾಡಿಕೋರರ ತಂಡ ಜಾರುತಿಹುದು !
ತಿಂಬ ಸಂಬಳಕಿನ್ನು ತೇಗದೆಯ ಬೀಗದೆಯೆ
ತುಂಬ ತಗ್ಗುತ ಬಗ್ಗಿ ದುಡಿವೆನಯ್ಯಾ !

—o—

ನಾಡು ಬಾಂಬು

ಮೊನ್ನೆ ಒಂದು ದೊಡ್ಡ ಕಛೇರೀಲಿ ಒಬ್ಬ ಪುಟ್ಟನೌಕರ ಬಾಧೆ ಕಳಕೊಳ್ಳುವ ಕೊಠಡಿಗೆ ಹೋದನಂತೆ. ಮೂಲೇಲಿ ಒಂದು ನಾಡು ಬಾಂಬು ಕಾಣಿಸ್ತಂತೆ. ಉಸಿರಾಡದೆ ಹೊರಕ್ಕೆ ಬಂದನಂತೆ. ತನ್ನ ಸೂಪರಿಂಟೆಂಡೆಂಟಿಗೆ ಹೇಳಿದನಂತೆ. ಅಲ್ಲಿ ಬಾಂಬಿದೆ ಹೋಗಿ ನೋಡಿಸಾರ್ ಅಂತ. ಅವರು ಹೋದಾಗ ಬಾಂಬು ಸಿಡಿದರೆ ಇವನಿಗೆ ಅವರ ಕೆಲಸ ಖಾಯಂ ಅಂತಲೋ ಏನೋ-- ಅವರೂ ಬುದ್ಧಿವಂತರು. ಅವರು ತಮ್ಮ ಮೇಲಧಿಕಾರಿಗಳಿಗೆ ಹೇಳಿದರಂತೆ-- ಅವರೂ ಕೆಳದರ್ಜೆಯಿಂದ ಮೇಲಕ್ಕೆ ಬಂದವರು, ತಮ್ಮ ಹಿರಿಯರಿಗೆ ಹೇಳಿದರಂತೆ-- ಅವರು ಇಲಾಖಾಧಿಕಾರಿಗಳು, ಇದರ ಒಳಮರ್ಮ ತಿಳಿಯದೆ "ಬಾಂಬೇ! ಎಲ್ಲಿ?" ಎಂದು ಎದ್ದು ಆ ಕೊಠಡಿಗೆ ಹೋದರಂತೆ. ಮೂಲೇಲಿ ಒಂದು ನಾಡು ಬಾಂಬು--ಅದಕ್ಕೂ ಆರಿಹೋದ ಅರ್ಧ ಸಿಗರೇಟಿಗೂ ಮಧ್ಯೆ ಒಂದು ಅಗ್ನಿವಾಹಕ ಟೇಪು. ಝುಂಗಾಬಲ ಉಡುಗಿಹೋಯ್ತಂತೆ--ಅಷ್ಟರಲ್ಲೇ ಅವರ ಜತೆ ಅಧಿಕಾರಿಗಳೂ ಬಂದರಂತೆ. "ಛೇ, ಇಲ್ಲೇನು ಕೆಲಸ? ಬಾಂಬು ಇದ್ದರೆ ಬಡನೌಕರರು ತೆಗೀತಾರೆ-- ನಾವು ಹೋಗಿ ಆಕಸ್ಮಿಕ ಆದರೆ, ಯಾರು ಹೊಣೆ?" ಎಂದು ಬೇಗ ಬೇಗ ಹೊರಕ್ಕೆ ಹೋದರಂತೆ.

ಬಾಂಬು ಸಿಡಿಯಲೇ ಇಲ್ಲವಂತೆ--ಯಾರಿಗೂ ಪ್ರಮೋಷನ್ ದೊರೆಯಲಿಲ್ಲವಂತೆ.



ವಿಜಯ ದಶಮಿ

ಕನ್ನಡದ ಸೇವೆಯಲಿ ನುರುಗಿ ಹಣ್ಣಾದವರೆ ! ವೀರ ಕನ್ನಡ ಧೀರರೆ !
ಸೀಮೋಲ್ಲಂಘನ ಮಾಡಿರಿ ಇಂದು, ಭೀತಿಯ ಸೀಮೆಯ ದಾಟುತಲಿ !
ಮಂಗಳ ಮಸಗಿತು ಮೈಸೂರರಮನೆ, ಸಿಂಗರವಾಯಿತು ಮೈಸೂರು !
ನಲಿಗೆಯನು ಬೆಳೆಸುತ್ತ ನುಲಿಗೆಯನುಮಾಡಿದರು ಕನ್ನಡಕೆ ಬಂತು ಕೇಡು!
ಅರಸಾಗಿ ಆಳೋಣ , ಮನೆಮುರುಕರನು ಮುರಿದು !
ಕಳೆದುದಕೆ ಅಳುತಳುತ ಕುಳಿತು ಫಲವೇನು ?
ಈ ನಾಡಿನೊಳು ಮಾಡಿ ಪುಣ್ಯಪುತ್ರರ ಬೀಡು !
ಕನ್ನಡ ನಾಡಿನ ಗುಡಿಗಳಸಕೆ ಹೊಸ-
ತೇಜವನು ನಮಗೀವ ವೀರವೃಂದದ ಬೀಡು.
ಗುಡುಗನು ಗುಡುಗಿಸಿ ನೆಲವನು ನಡುಗಿಸಿ
ಕೂಗುವ ನಾವೆಲ್ಲರು ಕೂಡಿ
ಮನದಣಿಯೆ ಕಣ್ದಣಿಯೆ
ಕನ್ನಡದ ಕಣ್ಣದು
ಮಂಗಳಬೆಳಕದು
ಮೈಸೂರು

(ಸಂಕಲನ)

ಚೊಕ್ಕಮ್ಮನವರ ಗಾದೆಗಳು

ಶ್ರೀಮತಿ ಚೊಕ್ಕಮ್ಮನವರು ಮಹಿಳಾ ಸಮಾಜದ ನಂಬರಾದಾಗಿನಿಂದಲೂ ಒಂದು ಮಹತ್ತರ ಆಕಾಂಕ್ಷ ಅವರನ್ನು ಪೀಡಿಸುತ್ತಿತ್ತು-- ಜನ ನೆರೆದಾಗಲೆಲ್ಲಾ, ಸಮಯ ಸಿಕ್ಕಾಗಲೆಲ್ಲಾ, ತಾವು ಬಾಲ್ಯದಿಂದಲೂ ಮೋಹಬಿದ್ದು ಕಲಿತ ಗಾದೆಗಳನ್ನು ಚಲಾಯಿಸಬೇಕೆಂಬುದು. ಏಕೆಂದರೆ ಮನೆಯಲ್ಲಿ ಶ್ರೀಮಾರ್ ಶಿಂಗ್ರಾಚಾರಿ ಚೊಕ್ಕಮ್ಮನವರ ಮೇಲೆ, 'ಗಂಡಸಿಗ್ಯಾಕೆ ಗೌರೀ ದುಃಖ', 'ಕಂಡದ್ದ ಬಿಡದು ಗಂಡೇ ಮಾರಿ', 'ಹತ್ತಿ ತೂಗುವಲ್ಲಿನ ಹೆಣದ ಹಾಗೆ' ಇತ್ಯಾದಿ ಗಾದೆಗಳಲ್ಲದೆ ಬಾಕಿ ಆನೇಕವನ್ನು ಪ್ರಯೋಗಿಸುವ ಅವಕಾಶವಿರಲಿಲ್ಲ.

ಒಂದಾನೊಂದು ಬಾರಿ ಸಮಾಜದ ಮಕ್ಕಳಮ್ಮಗಳು ಅಧ್ಯಕ್ಷಿಣಿಗೆ ಸತ್ಕೂಟ ಒಂದನ್ನು ಏರ್ಪಡಿಸಿದ್ದವು. ಇಂಥ ಸತ್ಕೂಟಗಳು ಒಬ್ಬೊಬ್ಬ ಅಧ್ಯಕ್ಷಿಣಿ 'ಹೋದಾಗಲೂ', ಎಷ್ಟೋ ನಡೆದಾಗ್ಯೂ, "ರೊಟ್ಟಿ ಹಳಸಿತ್ತು - ನಾಯಿ ಕಾದಿತ್ತು" ಅಂದ ಹಾಗೆ ಚೊಕ್ಕಮ್ಮನವರ ಗಾದೆಗಳ ಚಲಾವಣೆಗೋ ಎಂಬಂತೆ ಸದವಕಾಶವಾಯ್ತು.

ತುಂಬಿದ ಸಭೆಯ ಮಕ್ಕಳ ಹಾಗೂ ಮಕ್ಕಳಮ್ಮಗಳ ಕಾಕಾರವಗಳ ಮಧ್ಯೆ ಅಧ್ಯಕ್ಷಿಣಿ ಶ್ರೀಮತಿ ತುಂಗಮ್ಮಾ ತಿಮ್ಮಯ್ಯನವರು, ದಸರಾ ಜನಜಂಗುಳಿಯನ್ನು ಭೇದಿಸಿಕೊಂಡು ನುಗ್ಗುವ ಮದ್ದಾನೆಯೋಪಾದಿಯಲ್ಲಿ ತಮ್ಮ ಮಂದಹಾಸವನ್ನೂ, ಮಂದಗಮನವನ್ನೂ ಸಭೆಯಲ್ಲಿ ಬೀರುತ್ತಾ ತಮ್ಮದೇ ಆದ ವಿಕಟಾಟ್ಟಹಾಸದಿಂದ ಅಟ್ಟ (ವೇದಿಕೆ)ವನ್ನು ಅಲಂಕರಿಸಿದರು

'ಮದ್ದೂರು ಉದ್ದಿನ ಒಡೆಗೆ ಕಾದಿರುವ ಹದ್ದಿ'ನಂತೆ ಅಧ್ಯಕ್ಷಿಣಿಯ ಸುಸ್ವಾಗತಮಾಡಲು ಹಾತೊರೆಯುತ್ತಿದ್ದ ಚೊಕ್ಕಮ್ಮನವರು, "ಆಯ್ಯೋ............... 'ಹೋದೆಯಾ ಪಿಶಾಚಿ ಅಂದರೆ ಬಂದೆ ಬೆಳಕಂಡೀಲಿ' ಅಂದ ಹಾಗೆ....... ನಿಮಗೋಸ್ಕರವೇ ಕಾದಿದ್ದೆವು" ಎನ್ನುತ್ತಾ ಈ ಸಮಾರಂಭಕ್ಕೋಸ್ಕರವೇ ಸಿದ್ಧಪಡಿಸಿದ್ದ ಮುತ್ತುಗದ ಹಾರವನ್ನು ತುಂಗಮ್ಮನವರ ಕುತ್ತಿಗೆಗೆ ತೂಗುಬಿಟ್ಟರು ಸಭೆ ಕೇಕಾಯಿಸಿತು--ಚಪ್ಪಾಳೆಗಳ ಮಧ್ಯೆ ಚೊಕ್ಕಮ್ಮನವರು ಮುಂದುವರಿದರು.......

"ಈ ಮಹಾಸುದಿನದಲ್ಲಿ ನಮ್ಮ ನಮಾಜದ ಕಾರ್ಯದರ್ಶಿನಿ-- ಶ್ರೀಮತಿ ಕಪಿಲಾ ಕಾವೇರಪ್ಪನವರು ಹಟಾತ್ತಾಗಿ ಮನೆಯಲ್ಲೇ ಇರಬೇಕಾದುದರಿಂದ 'ಹಾಳೂರಿಗೆ ಉಳಿದವಳೇ ಗೌರಿ' ಎಂಬಂತೆ ಇಂದಿನ ಕಾರ್ಯಕಲಾಪಗಳ ಹೊರೆ

ನನ್ನ ಮೇಲೆ ಬಿದ್ದಿದೆ. ಈ ದಿನದ ಸಮಾರಂಭವನ್ನು ಕೈಕೊಳ್ಳಲು ಬಂದಿರುವ ಶ್ರೀಮತಿ ತುಂಗಮ್ಮನವರು 'ದೂರದ ಬೆಟ್ಟ ನುಣ್ಣಗೆ' ಅನ್ನೋ ಹಾಗೆ ತುಂಬಾ ಸಭ್ಯ ಬುಡಕಟ್ಟಿನವರು. ಇವರ ಬಾಲ್ಯ ಹಾಗೂ ಯೌವನಾವಸ್ಥೆಯ ಜೀವನದ ಚಟುವಟಿಕೆಗಳನ್ನು ಸಭೆಗೆ ಪರಿಚಯ ಮಾಡಿಕೊಡುವುದು, "ಇದ್ದದ್ದಿದ್ದ ಹಾಗೇ ಹೇಳಿದರೆ ಎದ್ದು ಬಂದು ಎದೆಗೊದ್ದರು", ಅಂದಂತೆ ....ಬಹಳ ದೊಡ್ಡ ಕತೆ. 'ಶಿವಪೂಜೆಯಲ್ಲಿ ಕುರುಡಿ ನುಗ್ಗಿದ ಹಾಗೆ' ...ಈ ಸಾಹಸಕ್ಕೆ ನಾ ಕೈಹಾಕಲಾರೆ.

ಆದರೂ 'ಕೈಗೆ ಬಂದ ಮುತ್ತು ಬಾಯಿಗಿಲ್ಲ' ಅನ್ನದೆ ನಾನು ಎರಡು ಮಾತು ಹೇಳಬಯಸುತ್ತೇನೆ. ತುಂಗಮ್ಮನವರದು ಹುರುಳಿಕಟ್ಟಿನಂತೆ ಸರಳ ಸ್ವಭಾವ. 'ಧರ್ಮಕ್ಕೆ ದುಪಟಿ ಕೊಟ್ರೆ ಡ್ರೈವಾಷ್ ಮಾಡಿಕೊಡು' ಅಂದ ಹಾಗೆ ಬಹಳ ಒತ್ತಾಯದ ಮೇಲೆ ಈ ಸಮಾರಂಭಕ್ಕೆ ದಯಮಾಡಿಸಿದ್ದಾರೆ. ಅಲ್ಪಕಾಲ ಮಾತ್ರವೇ ಅವರು ಇಲ್ಲಿ ಇರಲು ಸಾಧ್ಯವೆಂದು ತಿಳಿಸಿದ್ದಾರೆ––ಏಕೆಂದರೆ 'ತಿನ್ನೋದು ಹಿಟ್ಟು–ಆಡೋದು ಕಿರ್ಕಿಟ್ಟು' ಅನ್ನುವಂತೆ ಶ್ರೀಮಾನ್ ತಿಮ್ಮಯ್ಯ ತುಂಗಮ್ಮನವರಿಗೆ ಈ ದಿನ ಯಾವುದೋ ಮ್ಯಾಚ್ ಇದೆಯಂತೆ. ಶ್ರೀಮತಿ ತುಂಗಮ್ಮನವರು 'ಡಬ್ಬಳ ಹಾಕಿದರೆ ಸೂಜಿ ಹೊರಬಂತು' ಅಂದಂತೆ ತಿಮ್ಮಯ್ಯ ನವರನ್ನು ಕಟ್ಟಿಕೊಂಡ ಮೇಲೂ ಸಹ, 'ಗೂಳಿ ಬಂದಾಗ ಏರಿಕೊ'ಂಡಂತೆ ತಿಮ್ಮಯ್ಯನವರನ್ನು ಹಸುಳೆಯಂತೆ ಕಾಪಾಡುತ್ತಿದ್ದಾರೆ––ಇದರಿಂದ ತಿಮ್ಮಯ್ಯ ನವರು 'ರೋಗಿ ಬಯಸಿದ್ದು ತಿಳಿಸಾರು––ವೈದ್ಯ ಕೊಟ್ಟಿದ್ದು ಕ್ವಿನೈನ್ ನೀರು' ಅಂತಂದ ಹಾಗೆ ತಮ್ಮ ಹುಡುಗತನದ ದರ್ಪವನ್ನೆಲ್ಲಾ ಕಳೆದುಕೊಂಡು ಸಾಧು ವಾಗಿದ್ದಾರೆ. 'ನವಿಲು ನೋಡಿ ಕೆಂಬೂತ ಪುಕ್ಕ ತರದುಕೊಂಡ'ಂತೆ ಶ್ರೀಮತಿ ಯವರು ಮದುವೆಯಾದರೂ ವೀಣೆ ಅಭ್ಯಾಸ ಬಿಡಲಿಲ್ಲ. ನಿಮ್ಮಲ್ಲಿ ಅನೇಕರಿಗೆ ಇವರ ನಖದರ್ಶನವಾಗಿರಬಹುದು, 'ಅಂಗೈನೋಡಿ ಅಯ್ಯೋ' ಎಂದ ಹಾಗೆ.

'ಕಂತ್ರಿನಾಯೀಗೆ ಕಾಂತಿ ಸಾಬೂನು ತಿಕ್ಕಿದ್ರೂ'ಂತ ಈ ದಿನ ಇವರ ಗೌರವಾರ್ಥವಾಗಿ ಏರ್ಪಡಿಸಿರುವ ಉಪಹಾರವನ್ನು ತೀರಿಸಬೇಕೆಂದು ಸಭೆಯ ಪರ ವಾಗಿ ನಾನು ಶ್ರೀಮತಿ ತುಂಗಮ್ಮನವರಲ್ಲಿ ವಿಶ್ವಾಸದಿಂದ 'ಮುಸುಕಿನೊಳಗಿನ ಮುದ್ದಿ'ನಂತೆ ಬಿನ್ನವಿಸಿಕೊಳ್ಳುತ್ತೇನೆ. "ರಹೀಂಸಾಬೀಗ್ಯಾಕೆ ಋಷಿಪಂಚಮಿ" ಅನ್ನೋ ಹಾಗೆ.. ಪಾಪ........ಮನೇ ಒಳಗಿನ ಮಂಗಳ ಕಾರ್ಯ ಬಿಟ್ಟು ಇಲ್ಲಿಗೆ ಬಂದಿದ್ದಾರೆ––ಪಾಪ....'ಅರವತ್ತಕ್ಕೆ ಅರಳೋ ಅವಲಕ್ಕಿಯೋ"!

ಇನ್ನೊಮ್ಮೆ ಅಧ್ಯಕ್ಷಿಣಿಯವರನ್ನು ನಿಮ್ಮ ಪರವಾಗಿ ವಂದಿಸಿ, ಅವರು ಬಂದ ದ್ದಕ್ಕೆ ಕೃತಜ್ಞತೆಯಿಂದ ನಮ್ಮ ಸಂತೋಷವನ್ನು ವ್ಯಕ್ತಪಡಿಸಿ, "ಬ್ರಂಹಾಸ್ತ್ರ ಬಿದ್ದರೂ ಗುಬ್ಬಿ ಸಾಯಲಿಲ್ಲ" ಅಂತಲ್ಲದೆ ನನ್ನ ಈ ಪುಟ್ಟ ಉಪನ್ಯಾಸವನ್ನು ನಿಲ್ಲಿಸು ತ್ತೇನೆ. ಕಾಕತಾಳನ್ಯಾಯದಂತೆ ಈವರೆಗೂ ತಾಳ್ಮೆಯಿಂದ ಕೂತಿದ್ದ ನೀವೆಲ್ಲ

ನನ್ನ ಭಾಷಣದಲ್ಲಿ ಕಂಡುಬಂದ ಚಿಪ್ಪುನೆಪ್ಪುಗಳನ್ನು ಕಂಸಕ್ಷೀರನ್ಯಾಯದೋ ಪಾದಿಯಲ್ಲಿ ನುಂಗಿಬಿಡುತ್ತೀರಾಗಿ ನನ್ನ ನಂಬಿಕೆ.

" 'ಹಾಲು ಕಂಡಲ್ಲಿ ಬೆಕ್ಕು ಕೂತಿತು ; ಕೂಳುಕಂಡಲ್ಲಿ ನಾಯಿ ಕೂತಿತು ' ಅನ್ನುವಂತೆ ಈದಿನ ಬಂದಿರುವ ನಂಬರುದಾರರೆಲ್ಲ ಈ ಸಮಾರಂಭದಲ್ಲಿ ಏರ್ಪಡಿಸಿರುವ ಉಪಹಾರಕ್ಕೆ ದಯಮಾಡಿಸಿ, ಇಂದಿನ ಕೂಟವನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸುತ್ತೀರಾಗಿ ನನ್ನ ಭರವಸೆ. 'ಕೂರೆಗಂಜಿಕೊಂಡು ಸೀರೆಬಿಟ್ರು' ಅನ್ನುವಂತೆ ಯಾರೂ ತಪ್ಪಿಸಿಕೊಳ್ಳಬಾರದು. "

ದಟ್ಟವಾದ ಚಪ್ಪಾಳೆಗಳ ಮಧ್ಯೆ ಚೊಕ್ಕಮ್ಮನವರು ತಮ್ಮ ಮನದಾಸೆ ಕೈಗೂಡಿದ್ದಕ್ಕೆ ಹಿಗ್ಗಿ, ವಿಜಯಮುದ್ರೆಯಿಂದ ಕೂಡಿದ ಮೂಗನ್ನು ಗಗನಕ್ಕೆ ಚಾಚುತ್ತಾ ಅಧ್ಯಕ್ಷಿಣಿಯವರೊಡನೆ ಹೊರಟರು. ತುಂಗಮ್ಮನವರೂ ಸಭೆಗೆ ಕೃತಜ್ಞತೆಯಿಂದ ನಮಸ್ಕರಿಸಿ ಎದ್ದರು.

ಅಂದಿನಿಂದ ಕಾರ್ಯದರ್ಶಿ ಇಲ್ಲದಿದ್ದರೆ ಕಾರ್ಯ ನಿಂತಂತೆಯೇ. ಚೊಕ್ಕಮ್ಮನವರಿಗೆ ಮಾತ್ರ ಆ ಕೆಲಸವನ್ನು ಒಪ್ಪಿಸುವುದಿಲ್ಲ. ಇದರಿಂದ ರೇಗಿದ ಚೊಕ್ಕಮ್ಮನವರು 'ಗಾದೆಯೋ ಬಾಧೆಯೋ' ಎಂಬ ನಾಟಕವನ್ನೂ 'ಅಯ್ಯೋ' ಎಂಬ ಗಾದೆಗಳ ನಿಘಂಟನ್ನೂ ಹೊರಗೆಡಹಲು ಟೊಂಕಕಟ್ಟಿದ್ದಾರಂತೆ. ಎಚ್ಚರಿಕೆ ! ಕಾದಿರಿ ! !

—ಟೀಯಸ್ಸಾರ್ರಾವ್.

—o—

'ಡಿಸ್ಟ್ರಿಕ್ಟ್‌ಗೆ ಒಬ್ಬೊಬ್ಬ ಮಂತ್ರಿ ಅಂತ ೯ ಜನ ಮಂತ್ರಿಗಳನ್ನು ನೇಮಿಸಿದರೆ—ಹತ್ತನೆಯವರ ಗತಿ ?' ಎಂದು ಓದುಗರು ಕೇಳಿದ್ದಾರೆ----

---ಯಾಕೆ ? ಚಿನ್ನದಗಣಿ ಒಂದು ಡಿಸ್ಟ್ರಿಕ್ಟ್ ಅಲ್ಲವೇ---ಗಣನೆಗೆ

* * * *

ಅಯ್ಯೋ ಪಾಪ ! ಅಂದರೆ---ಇನ್ನೂ ಎರಡು ತಿಂಗಳು ಇರ್‍ತೀನಿ ಅಂದನಂತೆ.

ಎ. ಎನ್. ಸುಬ್ಬರಾವ್.

* * * *

ರೀತಿ ತೋರಿಸುಕ್ಕೆ ಪೋಲೀಸು ಕರೆಸಿದರೆ ಆತ ಮನೆಬಿಟ್ಟು ಆರು ದಿನಗಳಂತೆ.

* * * *